## ಶನಿವಾರ, ೨೧ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ಹನ್ನೊಂದು ಗಂಟೆಗೆ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆಸೇರಿತು.

### ಪರಿಚಯ ಪತ್ರಗಳ ಸಲ್ಲಿಕೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿಮಾಡುವುದು

**ಮಾನ್ಯ ಅಧ್ಯಕ್ಷರು** : ಅಂತಾರಾಷ್ಟ್ರೀಯ ಸಮಾವೇಶವೊಂದರಲ್ಲಿ ಭಾಗವಹಿಸಲು ತೆರಳಿದ್ದ ಮತ್ತು ಈ ಬೆಳಗ್ಗೆ ಮೊದಲ ಬಾರಿಗೆ ಇಲ್ಲಿಗೆ ಬಂದಿರುವ ಇನ್ನೊಬ್ಬರು ಸದಸ್ಯೆಯನ್ನು ಸ್ವಾಗತಿಸುವುದರಲ್ಲಿ ಸದನವು ನನ್ನೊಡನೆ ಪಾಲ್ಗೊಳ್ಳುತ್ತದೆ. ರಾಜಕುಮಾರಿ ಅಮೃತ್ ಕೌರ್ ದಾಖಲೆ ಪುಸ್ತಕದಲ್ಲಿ ಸಹಿಮಾಡಬೇಕೆಂದು ನಾನು ಕೋರುತ್ತೇನೆ.

ಅನಂತರ ಕೆಳಗೆ ನಮೂದಿಸಿದ ಸದಸ್ಯರು ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸಿ ದಾಖಲೆ ಪುಸ್ತಕದಲ್ಲಿ ಸಹಿಮಾಡಿದರು.

**ರಾಜಕುಮಾರಿ ಅಮೃತ್ ಕೌರ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ ) ;

**ಸರ್ ಪದ್ಮಪತ್ ಸಿಂಘಾನಿಯ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

### ನಿರ್ಣಯ ಆರ್‌ಇ : ಸಂವಿಧಾನ ರಚನಾಸಭೆಯ ಸಂಧಾನ ಸಮಿತಿಯ ಚುನಾವಣೆ

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಮುಂದಿನ ನಿರ್ಣಯವನ್ನು ಮಂಡಿಸಲು ಅನುಮತಿ ಕೋರುತ್ತೇನೆ :

"ರಾಜರ ಮಂಡಲಿಯು ರಚಿಸಿದ ಸಂಧಾನ ಸಮಿತಿ ಮತ್ತು ಭಾರತದ ರಾಜ್ಯಗಳ ಇತರ ಪ್ರತಿನಿಧಿಗಳೊಡನೆ ಸಮಾಲೋಚಿಸಲು ಕೆಳಗೆ ನಮೂದಿಸಿದ ಸದಸ್ಯರ ಒಂದು ಸಮಿತಿಯನ್ನು ರಚಿಸಲು ಈ ಸಭೆಯು ನಿರ್ಣಯಿಸುತ್ತದೆ :

(೧) ಮೌಲಾನಾ ಅಬುಲ್ ಕಲಾಮ್ ಆಜಾದ್

(೨) ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು

(೩) ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್

(೪) ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ

(೫) ಶ್ರೀ ಶಂಕರರಾವ್ ದೇವ್ ಮತ್ತು

(೬) ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

ಈ ಸಮಿತಿಯ ಉದ್ದೇಶವು ಹೀಗಿದೆ:

(ಎ) ೧೬ನೇ ಮೆ, ೧೯೪೬ರ ಸಂಪುಟ ಸಮಿತಿಯ ಹೇಳಿಕೆಯಲ್ಲಿ ಭಾರತದ ರಾಜ್ಯಗಳಿಗೆ ಮೀಸಲಾಗಿರಿಸಿದ ಸ್ಥಾನಗಳ ಸಂಖ್ಯೆಯು ವಿಧಾಯಕ ಸಭೆಯಲ್ಲಿ ೯೩ ಅನ್ನು ಮೀರದಂತೆ ಸ್ಥಾನಗಳ ವಿತರಣೆಯನ್ನು ತೀರ್ಮಾನಿಸುವುದು, ಮತ್ತು

(ಬಿ) ಈ ಸಭೆಗೆ ರಾಜ್ಯಗಳ ಪ್ರತಿನಿಧಿಗಳು ಆಯ್ಕೆಯಾಗಿ ಬರುವ ವಿಧಾನವನ್ನು ನಿರ್ಧರಿಸುವುದು.

ಈ ಸಭೆಯು ಮುಂದುವರಿದು ನಿರ್ಣಯಿಸುವುದೇನೆಂದರೆ ಮುಂದೆ ಮೂರು ಜನರಿಗೆ ಹೆಚ್ಚಿಲ್ಲದಂತೆ ಇತರ ಸದಸ್ಯರನ್ನು ಸಮಿತಿಗೆ ಸೇರಿಸಬಹುದು ಮತ್ತು ಅಧ್ಯಕ್ಷರು ಸೂಚಿಸುವ ಕಾಲದಲ್ಲಿ ಮತ್ತು ರೀತಿಯಲ್ಲಿ ಈ ಸಭೆಯು ಅವರನ್ನು ಚುನಾಯಿಸಬಹುದು."

**ಶ್ರೀ ಸೋಮನಾಥ ಲಹಿರಿ** (ಬಂಗಾಳ : ಸಮಾನ್ಯ) : ಈ ಪ್ರಸ್ತಾವಕ್ಕೆ ತಿದ್ದುಪಡಿಯನ್ನು ಸಲ್ಲಿಸಲು ಇರುವ ವಿಧಾನ ಏನು ಎಂದು ತಿಳಿಯಲು ನಾನು ಬಯಸುತ್ತೇನೆ. ತಿದ್ದುಪಡಿಗಳನ್ನು ಮಂಡಿಸಲು ನಮಗೆ ಕೆಲವು ಗಂಟೆಗಳನ್ನಾದರೂ ನೀಡಬೇಕು ಎಂದು ನಾನು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಅದು ಈ ಪ್ರಸ್ತಾವದ ತಿರುಳನ್ನು ಕುರಿತ ತಿದ್ದುಪಡಿಯೋ ಅಥವಾ ಹೆಸರುಗಳಿಗೆ ಸಂಬಂಧಿಸಿದ್ದೋ?

**ಶ್ರೀ ಸೋಮನಾಥ ಲಹಿರಿ** : ಪ್ರಸ್ತಾವದ ತಿರುಳಿಗೆ ಸಂಬಂಧಿಸಿದ್ದು.

**ಮಾನ್ಯ ಅಧ್ಯಕ್ಷರು** : ನೋಡೋಣ.

**ಶ್ರೀ ಶ್ರೀಪ್ರಕಾಶ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಇದಕ್ಕಾಗಿ ಅಪರಾಹ್ನ ೧–೧೫ ಗಂಟೆಯನ್ನು ನಿಗದಿಪಡಿಸುವುದು ಅತ್ಯುತ್ತಮ. ಅಷ್ಟುಹೊತ್ತಿಗೆ ತಿದ್ದುಪಡಿಗಳನ್ನು ಮಂಡಿಸಬಹುದು ಮತ್ತು ಈ ಮಧ್ಯೆ ನಾವು ನಿರ್ಣಯವನ್ನು ಕುರಿತ ಚರ್ಚೆಯನ್ನು ಮುಂದುವರಿಸಬಹುದು.

**ಮಾನ್ಯ ಅಧ್ಯಕ್ಷರು** : ಮಂಡನೆಕಾರರು ಮತ್ತು ಅನುಮೋದಕರು ಒಂದು ಗಂಟೆಗಿಂತ ಸ್ವಲ್ಪ ಹೆಚ್ಚು ತೆಗೆದುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಆ ಸಮಯದಲ್ಲಿ ನೀವು ತಿದ್ದುಪಡಿಯನ್ನು ಮಂಡಿಸಲು ಸಮರ್ಥರಾಗುತ್ತೀರಿ.

**ಶ್ರೀ ಕೆ.ಎಮ್. ಮುನ್ಷಿ** : ಇದು ಹೆಚ್ಚು ಕಡಿಮೆ ಒಂದು ಔಪಚಾರಿಕವಾದ ಪ್ರಸ್ತಾವ. ಈ ನಿರ್ಣಯದಲ್ಲಿ ಹೇಳಿದ ಉದ್ದೇಶಗಳಿಗಾಗಿ ರಾಜ್ಯಗಳೊಡನೆ ಸಂಧಾನ ನಡೆಸುವುದಕ್ಕಾಗಿ ಈ ವಿಧಾಯಕ ಸಭೆಯು ಒಂದು ಸಮಿತಿಯನ್ನು ನೇಮಿಸಬೇಕು ಎಂದು ಸಂಪುಟ ನಿಯೋಗದ ಹೇಳಿಕೆಯಷ್ಟೇ ಅಲ್ಲದೆ ಲಾರ್ಡ್ ಪೆಥಿಕ್ ಲಾರೆನ್ಸ್‌ರ ಭಾಷಣ ಕೂಡ ಪರಿಭಾವಿಸಿದ್ದರ ಸರಳ ಕಾರಣದಿಂದಾಗಿ ಈ ಪ್ರಸ್ತಾವ ಅಷ್ಟೆ. ಮಾನ್ಯರೆ, ಇದಕ್ಕೆ ಸಂಬಂಧಿಸಿದಂತೆ ಲಾರ್ಡ್ ಪೆಥಿಕ್ ಲಾರೆನ್ಸ್ ಅವರ ಈಚಿನ ಅಭಿಪ್ರಾಯಗಳನ್ನು ನಾನು ಉಲ್ಲೇಖಿಸಬಹುದು. ಲಾರ್ಡ್ ಪೆಥಿಕ್ ಲಾರೆನ್ಸ್ ಹೀಗೆ ಹೇಳಿದ್ದಾರೆ:

> "ಸಂವಿಧಾನ ರಚನಾಸಭೆಯಲ್ಲಿ ರಾಜ್ಯಗಳನ್ನು ಪ್ರತಿನಿಧಿಸುವ ಸ್ಥಾನಗಳನ್ನು ತುಂಬಿಸುವುದು ಹೇಗೆ ಎಂಬುದನ್ನು ಕುರಿತಂತೆ ಭಾರತದ ರಾಜ್ಯಗಳು ನೇಮಿಸಿದ ಸಮಿತಿ ಮತ್ತು ಸಂವಿಧಾನ ರಚನಾಸಭೆಯ ಬ್ರಿಟಿಷ್ ಇಂಡಿಯಾ ಪಾರ್ಶ್ವವು ನೇಮಿಸಿದ ಸಮಿತಿ ಇವುಗಳ ನಡುವೆ ಸಂಧಾನ ನಡೆಯಬೇಕಾಗಿತ್ತು. ರಾಜ್ಯಗಳು ಈಗಾಗಲೇ ಒಂದು ಸಮಿತಿಯನ್ನು ನೇಮಕ ಮಾಡಿವೆ. ವಿಧಾಯಕ ಸಭೆಯ ಬ್ರಿಟಿಷ್ ಇಂಡಿಯಾ ಪಾರ್ಶ್ವವು ಸಮಿತಿಯನ್ನು ನೇಮಿಸಿದಾಗ ಸಂಧಾನಗಳು ಪ್ರಾರಂಭವಾಗಬಹುದಾಗಿವೆ."

ಈ ಸದನವು ಸುಲಭವಾಗಿ ಗ್ರಹಿಸುವಂತೆ ಆದಷ್ಟು ಬೇಗ ಈ ಸಂಧಾನಗಳನ್ನು ಪ್ರಾರಂಭಿಸುವುದು ಅಗತ್ಯವಾಗಿದೆ. ಆ ಕಾರಣದಿಂದಾಗಿ ಈ ನಿರ್ಣಯವನ್ನು ಈ ಸದನದ ಮುಂದೆ ಇಂದು ಮಂಡಿಸಲಾಗಿದೆ. ಪ್ರಸ್ತುತ ಸದಸ್ಯರ ಸಂಖ್ಯೆಯನ್ನು ಆರಕ್ಕೆ ಪರಿಮಿತಗೊಳಿಸಲಾಗಿದೆ. ಏಕೆಂದರೆ ಈ ಸಮಿತಿಯು ಸೂಕ್ಷ್ಮವಾದ ಸಂಧಾನಗಳೊಡನೆ ವ್ಯವಹರಿಸಬೇಕಾದುದರಿಂದ ಸಾಧ್ಯವಾದಷ್ಟೂ ಚಿಕ್ಕದಾಗಿರಬೇಕು. ಮಿಗಿಲಾಗಿ, ಈ ಸಮಿತಿಯನ್ನು

ನೇಮಿಸಲಾಗಿರುವ ಉದ್ದೇಶಗಳನ್ನು ಹೇಳಿಕೆಯಲ್ಲಿ ಸ್ಪಷ್ಟವಾಗಿ ವಿಶದಪಡಿಲಾಗಿದೆ. ಆದ್ದರಿಂದ ನಾನು ಈ ನಿರ್ಣಯವನ್ನು ಈ ಸದನದ ಒಪ್ಪಿಗೆಗಾಗಿ ಸಲ್ಲಿಸುತ್ತಿದ್ದೇನೆ.

**ಡಾ. ಸಚ್ಚಿದಾನಂದ ಸಿನ್ಹ** (ಬಿಹಾರ್ : ಸಾಮಾನ್ಯ) : ನಾನು ಅದನ್ನು ಅನುಮೋದಿಸುತ್ತೇನೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಸಂಧಾನಗಳ ಫಲಿತಾಂಶವನ್ನು ಈ ಸಭೆಯ ಮುಂದೆ ಮಂಡಿಸಲಾಗುವುದೇ?

**ಶ್ರೀ ಕೆ.ಎಮ್. ಮುನ್ಷಿ** : ಗೌರವಾನ್ವಿತ ಸದಸ್ಯರ ಮಾಹಿತಿಗಾಗಿ ನಾನು ಹೇಳುವುದೇನೆಂದರೆ ಸಂಪುಟ ನಿಯೋಗದ ಹೇಳಿಕೆಗೆ ಸಂಬಂಧಪಟ್ಟಂತೆ ಅದು ರಾಜ್ಯಗಳ ಪರವಾಗಿ ಸಂಧಾನ ಸಮಿತಿಗೆ ಒದಗಿಸುತ್ತದೆ. ಸಂವಿಧಾನ ರಚನಾಸಭೆಯ ಪರವಾದ ಸಂಧಾನ ಸಮಿತಿಯು ಸಭೆಸೇರಿ ವಿಧಾಯಕ ಸಭೆಗೆ ರಾಜ್ಯ ಪ್ರಾತಿನಿಧ್ಯದ ಸ್ವರೂಪವನ್ನು ನಿರ್ಧರಿಸುತ್ತದೆ. ನಾನು ಅರ್ಥಮಾಡಿಕೊಂಡಂತೆ ಸಂಪುಟ ನಿಯೋಗದ ಹೇಳಿಕೆಯ ಅರ್ಥ ಇದು. ಆದರೆ ಖಂಡಿತವಾಗಿಯೂ ವಿಷಯವನ್ನು ಈ ಸದನದ ಮುಂದೆ ತರಲಾಗುವುದು ಮತ್ತು ಅದನ್ನು ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಈ ಸದನಕ್ಕೆ ಒಂದು ಅವಕಾಶ ದೊರೆಯುತ್ತದೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ.

**ಶ್ರೀ ಪಿ.ಆರ್. ಠಾಕೂರ್** (ಬಂಗಾಳ : ಸಾಮಾನ್ಯ) : ಮಾನ್ಯರೆ, ನಾನು ಒಂದು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ. ಅದೇನೆಂದರೆ ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಹೆಸರಿನ ಅನಂತರ ಈ ಸದನದ ದಲಿತವರ್ಗಕ್ಕೆ ಸೇರಿದ ಸದಸ್ಯರೊಬ್ಬರ ಹೆಸರನ್ನು ಸೇರಿಸಬೇಕು.

ಈ ಅಂಶವನ್ನು ನಾನು ಒತ್ತಿ ಹೇಳುತ್ತಿರುವುದಕ್ಕೆ ಕಾರಣವೇನೆಂದರೆ ರಾಜ್ಯಗಳಿಗೆ ಮೀಸಲಾದ ಸ್ಥಾನಗಳನ್ನು ವಿಧಾಯಕ ಸಭೆಯಲ್ಲಿ ಹಂಚುವುದನ್ನು ನಿರ್ಧರಿಸಲಿರುವ ಈ ಸಮಿತಿಯಲ್ಲಿ, ರಾಜ್ಯಗಳ ಪ್ರತಿನಿಧಿಗಳನ್ನು ಆರಿಸುವ ವಿಧಾನಗಳನ್ನು ನಿರ್ಧರಿಸುವ ಈ ಸಮಿತಿಯಲ್ಲಿ ದಲಿತವರ್ಗದಿಂದ ಒಬ್ಬ ಸದಸ್ಯರನ್ನು ಸೇರಿಸಬೇಕಾದದ್ದು ಮುಖ್ಯವಾದದ್ದು. ರಾಜ್ಯಗಳಲ್ಲಿರುವ ದಲಿತವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳೆರಡೂ ಪ್ರಾಂತ್ಯಗಳಲ್ಲಿರುವ ದಲಿತವರ್ಗಗಳ ಪರಿಸ್ಥಿತಿಗಿಂತ ಕೇಡಾಗಿವೆ. ಆದ್ದರಿಂದ ಈ ಸದನದಿಂದ ದಲಿತವರ್ಗಗಳಿಗೆ ಸೇರಿದ ಒಬ್ಬ ಸದಸ್ಯರನ್ನು ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ನಿಮ್ಮಲ್ಲಿ ಯಾವುದಾದರೂ ಹೆಸರಿದೆಯೆ?

**ಶ್ರೀ ಪಿ.ಆರ್. ಠಾಕೂರ್** : ಯಾರು ಇರಬೇಕೆಂದು ಈ ಸದನವು ನಿರ್ಧರಿಸುತ್ತದೆ.

**ಶ್ರೀ ಸೋಮನಾಥ ಲಹಿರಿ** : ಮಾನ್ಯರೆ, ನನ್ನ ಬಳಿ ಎರಡು ತಿದ್ದುಪಡಿಗಳಿವೆ. ಸಮಿತಿಯ ನಿರ್ಧಾರಗಳು ಈ ಸಭೆಯ ಸ್ಥಿರೀಕರಣಕ್ಕೆ ಒಳಪಟ್ಟಿವೆಯೇ ಎಂಬುದನ್ನು ಈ ನಿರ್ಣಯದ ಮಂಡನೆಕಾರರು ಸ್ಪಷ್ಟಪಡಿಸಿಲ್ಲದ ಸಂಗತಿಯನ್ನು ಸ್ಪಷ್ಟಪಡಿಸುವುದು ನನ್ನ ಮೊದಲನೆಯ ತಿದ್ದುಪಡಿಯ ಉದ್ದೇಶ.

ತಿದ್ದುಪಡಿಗಳು ಹೀಗಿವೆ :

(೧) ಕೊನೆಯ ಕಂಡಿಕೆಗೆ ಮೊದಲು ಕೆಳಗೆ ನಮೂದಿಸಿದ ಅಂಶವನ್ನು ಈ ನಿರ್ಣಯಕ್ಕೆ ಸೇರಿಸಿ : "ಅಗತ್ಯವಾದ ಸಂಧಾನಗಳು ಮತ್ತು ಸಮಾಲೋಚನೆಗಳ ಅನಂತರ ವಿವಿಧ ರಾಜ್ಯಗಳಿಗೆ ಸ್ಥಾನಗಳ ಹಂಚಿಕೆ ಮತ್ತು ರಾಜ್ಯಗಳ ಪ್ರತಿನಿಧಿಗಳ ಆಯ್ಕೆಯ ವಿಧಾನವನ್ನು ಕುರಿತಂತೆ ಈ ಸಮಿತಿಯು ತನ್ನ ಅಂತಿಮ ಶಿಫಾರಸುಗಳನ್ನು ಈ ಸಭೆಯ ಮುಂದೆ ಸ್ಥಿರೀಕರಣಕ್ಕಾಗಿ ಮಂಡಿಸಬೇಕು."

(೨) ಸಮಿತಿಯ ಕಾರ್ಯಭಾರಗಳನ್ನು ಕುರಿತ ಅಂಶ(ಬಿ)–ಯ ಕೊನೆಯಲ್ಲಿ ಕೆಳಗೆ ನಮೂದಿಸಿರುವುದನ್ನು ಸೇರಿಸಿ :

"ಹೇಗಾದರೂ, ನೇರವಾದ ಚುನಾವಣೆಯ ಆಧಾರದ ಮೇಲೆ ಈ ಸದನಕ್ಕೆ ಪ್ರತಿನಿಧಿಗಳನ್ನು ಕಳುಹಿಸಲು ಅರ್ಹವಾದ ರಾಜ್ಯಗಳ ವಿಷಯಗಳಿಗೆ ಮಾತ್ರ ಈ ಸದನವು ಮನ್ನಣೆ ನೀಡುತ್ತದೆ ಎಂಬ ಸ್ಪಷ್ಟವಾದ

ತಿಳಿವಳಿಕೆಯೊಡನೆ ಈ ಸಮಿತಿಯು ಸಂಧಾನವನ್ನು ನಡೆಸತಕ್ಕದ್ದು."

ಇವು ನನ್ನ ಎರಡು ತಿದ್ದುಪಡಿಗಳು. ಈ ತಿದ್ದುಪಡಿಗಳು, ಅದರಲ್ಲೂ ವಿಶೇಷವಾಗಿ ಮೊದಲನೆಯ ತಿದ್ದುಪಡಿಯ ಉದ್ದೇಶ ಏನೆಂದರೆ, ನಿಮಗೆ ತಿಳಿದಿರುವಂತೆ, ಈವರೆಗೆ ಇನ್ನೂ ಸ್ಥಿರವಾಗಿಲ್ಲದ ರಾಜ್ಯ ಪ್ರತಿನಿಧಿಗಳ ಪ್ರಶ್ನೆಯನ್ನು ಸ್ಥಿರಗೊಳಿಸುವುದು. ನೀವು ಪ್ರಸ್ತಾವಿಸಿದ ಸಮಿತಿಯ ಬಹುಪಾಲು ಸದಸ್ಯರು ಮತ್ತು ಈ ಸದನದ ಬಹುಪಾಲು ಸದಸ್ಯರು ಕೂಡ ರಾಜ್ಯಗಳ ನಿರಂಕುಶ ಪ್ರಭುಗಳಿಗಿಂತ ಹೆಚ್ಚಾಗಿ ರಾಜ್ಯದ ಜನಸಮುದಾಯಕ್ಕೆ ಪ್ರಾತಿನಿಧ್ಯವಿರಬೇಕು ಎಂದು ಮನವರಿಕೆ ಮಾಡಿಕೊಂಡಿರುತ್ತಾರೆ ಎಂದು ನಾನು ತಿಳಿದಿದ್ದೇನೆ. ದುರದೃಷ್ಟವಶಾತ್ ರಾಜ್ಯಪತ್ರವು ಈ ಸಂಗತಿಯನ್ನು ಸ್ಪಷ್ಟಪಡಿಸುವುದಿಲ್ಲ. ಬೇರೊಂದು ದಿನ, ಪ್ರಾಯಃ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಎತ್ತಿ ತೋರಿಸಿದಂತೆ ಅದರ ಮೇಲೆ ವಿವಿಧ ವ್ಯಾಖ್ಯಾನಗಳು ಇವೆ. ಈ ಸಭೆಯಲ್ಲಿ ರಾಜ್ಯಗಳ ಪ್ರಾತಿನಿಧ್ಯ ಏನಾಗಿರಬೇಕೆಂದು ರಾಜ್ಯಗಳ ರಾಜರು ಮತ್ತು ಪ್ರಭುಗಳು ನಿರ್ಧರಿಸುವುದು ನಮಗೆ ಬೇಕಾಗಿಲ್ಲ ಎನ್ನುವುದನ್ನು ನಾವು ತೀರ ಸ್ಪಷ್ಟಗೊಳಿಸಬೇಕು. ಏಕೆಂದರೆ ಅವರು ಒಂದುಕಡೆ ನಿರಂಕುಶ ಪ್ರಭುಗಳಾಗಿ ಮತ್ತು ಇನ್ನೊಂದು ಕಡೆ ಬ್ರಿಟಿಷ್ ಸಾಮ್ರಾಜ್ಯವಾದದ ಕೈಗೊಂಬೆಗಳಾಗಿ, ಸಾಂವಿಧಾನಿಕವಾಗಿ ಏನು ಅಲ್ಪ ಸ್ವಾತಂತ್ರ್ಯವನ್ನು ಪಡೆಯಲು ನಾವು ಪ್ರಯತ್ನಿಸುತ್ತಿದ್ದೇವೆಯೋ ಅದನ್ನು ಕುಗ್ಗಿಸಲು ಬಯಸುತ್ತಾರೆ ಎಂಬ ಭೀತಿ ನಮಗಿದೆ. ಅದು ರಾಜ್ಯಗಳ ಸಮಸ್ತ ಪ್ರಜೆಗಳಿಗೆ ನ್ಯಾಯ ಸಲ್ಲಿಸಿದಂತೆಯೂ ಆಗುವುದಿಲ್ಲ.

ಮಾನ್ಯರೆ, ತಾವು ತಿಳಿದಿರುವಂತೆ, ಪ್ರಸ್ತುತ ಬಹುಪಾಲು ರಾಜ್ಯಗಳಾದ್ಯಂತ ರಾಜ್ಯಗಳ ಪ್ರಭುಗಳು ಒಂದು ಭಯಂಕರವಾದ ದಬ್ಬಾಳಿಕೆಯ ಆಡಳಿತವನ್ನು ನಡೆಸುತ್ತಿದ್ದಾರೆ. ಕಾಶ್ಮೀರದಲ್ಲಿ ಶ್ರೀಮತಿ ಅರುಣಾ ಆಸಫ್ ಅಲಿ ಅವರ ಸಭೆಗೆ ಕೂಡ ಆಡಳಿತವರ್ಗದವರು ಹೇಗೆ ಅಡ್ಡಿಯುಂಟುಮಾಡಿದರು ಮತ್ತು ಅಲ್ಲಿ ಪ್ರಜಾಸತ್ತಾತ್ಮಕ ನಿಯಮಗಳಿಗೆ ಅನುಗುಣವಾಗಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ಚುನಾವಣೆಗಳು ನಡೆಯಬೇಕಾಗಿದ್ದರೂ ಇಡೀ ರಾಷ್ಟ್ರೀಯ ಸಮಾವೇಶವೇ ಹೇಗೆ ದಬ್ಬಾಳಿಕೆಯಿಂದ ಭಂಗಕ್ಕೊಳಗಾಯಿತು ಎನ್ನುವುದನ್ನು ನೀವು ನೋಡಿದ್ದೀರಿ. ಹೈದರಾಬಾದ್‌ನಲ್ಲಿ ಹೈದರಾಬಾದಿನ ಸೈನ್ಯ ಮತ್ತು ಪೋಲೀಸರು ಕಳೆದ ಕೆಲವು ತಿಂಗಳುಗಳಲ್ಲಿ ಪುರುಷರು, ಸ್ತ್ರೀಯರು ಮತ್ತು ಮಕ್ಕಳೂ ಸೇರಿದಂತೆ ೭೦೦೦ ಜನರನ್ನು ಹೇಗೆ ನಿಷ್ಕರುಣೆಯಿಂದ ಕಡಿದುಹಾಕಿದರು ಎಂದೂ ನಾವು ಕೇಳಿದ್ದೇವೆ. ಈ ರಾಜರು ಇಲ್ಲಿಗೆ ಬಂದು ಸಮ್ಮೊಡನೆ ಸಂಧಾನ ನಡೆಸಿ ನಮ್ಮ ಸಂವಿಧಾನದ ರಚನೆಯಲ್ಲಿ ಕೈತೂರಿಸುವುದನ್ನು ನಾವು ಖಂಡಿತವಾಗಿಯೂ ಬಯಸುವುದಿಲ್ಲ. ಮಾನ್ಯರೆ, ಈ ಕಾರಣದಿಂದಲೇ ನಾನು ಎರಡನೆಯ ತಿದ್ದುಪಡಿಯನ್ನು ಮಂಡಿಸಿರುವುದು. ಅದೆಂದರೆ, ನೇರವಾದ ಚುನಾವಣೆಯ ಆಧಾರದ ಮೇಲೆ ಈ ಸದನಕ್ಕೆ ಪ್ರತಿನಿಧಿಗಳನ್ನು ಕಳುಹಿಸಲು ಅರ್ಹವಾದ ರಾಜ್ಯಗಳ ವಿಷಯಗಳಿಗೆ ಮಾತ್ರ ಈ ಸದನವು ಮನ್ನಣೆ ನೀಡುತ್ತದೆಯೆಂಬ ಸ್ಪಷ್ಟವಾದ ತಿಳಿವಳಿಕೆಯೊಡನೆ ಈ ಸಮಿತಿಯ ಸಂಧಾನವನ್ನು ನಡೆಸತಕ್ಕದ್ದು.

ನೀವು ಆರಿಸಿರುವ ಪ್ರತಿನಿಧಿಗಳು ರಾಜ್ಯಗಳ ಜನರ ಅಗತ್ಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತಾರೆ ಎನ್ನುವುದರಲ್ಲಿ ನನಗೆ ಅನುಮಾನವಿಲ್ಲ. ಆದರೆ ಅದು ಅಂತಿಮವಾಗಿ ಆಯಾ ರಾಜ್ಯದ ಜನರೇ ನಿರ್ಧರಿಸಿಕೊಳ್ಳಬೇಕಾದ ಸಂಗತಿ. ಆದ್ದರಿಂದ ಆಯ್ಕೆಮಾಡಲಾದ ಸದಸ್ಯರ ಮೇಲೆ ನನ್ನ ಪೂರ್ಣ ವಿಶ್ವಾಸವನ್ನಿರಿಸಿ, ಆದರೆ ಅಂತಿಮ ಸ್ಥಿರೀಕರಣವನ್ನು ಈ ಸಭೆಗೆ ಇಟ್ಟುಕೊಂಡು, ಭಾವೀ ಬೆಳವಣಿಗೆಗಳ ಬೆಳಕಿನಲ್ಲಿ, ರಾಜ್ಯಗಳ ರಾಜರು ಯಾವ ನಿಲುವನ್ನು ತಳೆಯುತ್ತಾರೆ ಎಂಬ ಬೆಳಕಿನಲ್ಲಿ ಮತ್ತು ರಾಜ್ಯಗಳ ಜನರು ಯಾವ ಹಕ್ಕೊತ್ತಾಯಗಳನ್ನು ಕೇಳುತ್ತಾರೆ ಎಂಬ ಬೆಳಕಿನಲ್ಲಿ ಅದು ಈ ಸಭೆಯ ಸ್ಥಿರೀಕರಣಕ್ಕೆ ಬದ್ಧವಾಗಿರಬೇಕು ಎಂದು ನಾನು ಮಂಡಿಸಿದ್ದೇನೆ.

**ಶ್ರೀ ಕೆ.ಎಮ್. ಮುನ್ಷಿ :** ಮಾನ್ಯರೆ, ನಾನು ಒಂದು ಮಾತು ಹೇಳಬಹುದೆ?

**ಮಾನ್ಯ ಅಧ್ಯಕ್ಷರು** : ನಿರ್ಣಯವನ್ನು ಮಂಡಿಸಲಾಗಿದೆ ಮತ್ತು ತಿದ್ದುಪಡಿಗಳನ್ನೂ ಮಂಡಿಸಲಾಗಿದೆ. ಈಗ ಈ ಇಡೀ ವಿಚಾರವು ಸದನದ ಚರ್ಚೆಗೆ ಮುಕ್ತವಾಗಿದೆ.

ಈ ನಿರ್ಣಯ ಮತ್ತು ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿವೆ. ಮಾತನಾಡಲು ಬಯಸುವ ಸದಸ್ಯರು ಮುಂದೆ ಬರಬಹುದು.

**ಶ್ರೀ. ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ನಾನು ಇನ್ನೊಂದು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ. "ಈ ಸಮಿತಿಯ ಉದ್ದೇಶವು ಹೀಗಿದೆ' ಎಂಬ ಶಬ್ದಗಳ ಅನಂತರ "ಸಂಬಂಧಪಟ್ಟ ಶಿಫಾರಸುಗಳನ್ನು ರೂಪಿಸುವುದು" ಎಂಬ ಶಬ್ದಗಳನ್ನು ಸೇರಿಸಬೇಕು ಎಂದು ಮಂಡಿಸಲು ನಾನು ಬಯಸುತ್ತೇನೆ. ಮತ್ತು ಅನಂತರ (ಎ) ಹಾಗೂ (ಬಿ) ಗಳಲ್ಲಿ "ತೀರ್ಮಾನಿಸುವುದು" ಮತ್ತು "ನಿರ್ಧರಿಸುವುದು" ಎಂಬ ಶಬ್ದಗಳನ್ನು ತೆಗೆದುಹಾಕುವುದು.

ನನ್ನ ತಿದ್ದುಪಡಿಯ ಉದ್ದೇಶವೇನೆಂದರೆ ಈ ಸದನವು ಯಾವುದೇ ವಿಚಾರವನ್ನು ಕುರಿತು ಅಂತಿಮ ತೀರ್ಮಾನವನ್ನು ಕೈಗೊಳ್ಳುವ ಅಧಿಕಾರವನ್ನು ಯಾವುದೇ ರೀತಿಯಲ್ಲಿ ಯಾವುದೇ ಸಮಿತಿಗೆ ನಿಯೋಜಿಸಬಾರದು. ಸಮಿತಿಯ ಸದಸ್ಯರ ಬಗೆಗೆ ನನಗೆ ಅಪನಂಬಿಕೆ ಇದೆ ಎಂದು ಅರ್ಥವಲ್ಲ. ಅದು ತತ್ತ್ವದ ವಿಚಾರ. ಪ್ರಸ್ತಾವಿಸಲಾದ ಸದಸ್ಯರ ಬಗೆಗೆ ನನಗೆ ಪೂರ್ಣ ವಿಶ್ವಾಸವಿದೆ. ಆದರೂ ಕೂಡ ಇದು ಒಂದು ಪ್ರಮುಖವಾದ ವಿಚಾರ. ಆದ್ದರಿಂದ ಯಾವುದೇ ರೀತಿಯ ಯಾವುದೇ ಸಮಿತಿಗೆ ಅಂತಿಮ ನಿಯೋಜನೆಯನ್ನು ನೀಡುವುದನ್ನು ನಾನು ಬಲವಾಗಿ ಆಕ್ಷೇಪಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಶ್ರೀ ಲಹಿರಿ ಅವರ ತಿದ್ದುಪಡಿಯು ನಿಮ್ಮ ತಿದ್ದುಪಡಿಯನ್ನು ಒಳಗೊಂಡಿದೆ ಎಂದು ಭಾವಿಸುತ್ತೇನೆ.

**ಶ್ರೀ ಕೆ. ಸಂತಾನಮ್** : ನಾನು ಅದನ್ನು ಸರಳಗೊಳಿಸಿದ್ದೇನೆ.

**ಮಾನ್ಯ ಅಧ್ಯಕ್ಷರು** : ಶ್ರೀ ಲಹಿರಿ ಅವರ ತಿದ್ದುಪಡಿಯಲ್ಲಿ ಅದು ಒಳಗೊಂಡಿದೆ.

**ಶ್ರೀ ಕೆ. ಸಂತಾನಮ್** : ನನ್ನ ತಿದ್ದುಪಡಿಯ ಓದಲು ಚೆನ್ನಾಗಿದೆ. ಅಂತಿಮ ತೀರ್ಮಾನದ ಅಧಿಕಾರ ಈ ಸದನಕ್ಕಿದೆ ಎಂಬ ತತ್ತ್ವವನ್ನು ಒಪ್ಪಿಕೊಳ್ಳಬೇಕು ಮತ್ತು ಅದನ್ನು ನಾವು ನೇಮಿಸುವ ಪ್ರತಿಯೊಂದು ಸಮಿತಿಯಲ್ಲೂ ಮತ್ತು ಪ್ರತಿಯೊಂದು ನಡವಳಿಯಲ್ಲೂ ಅನುಸರಿಸಬೇಕು. ಸಹಜವಾಗಿಯೇ ನನ್ನ ತಿದ್ದುಪಡಿಯು ಶ್ರೀ ಲಹಿರಿ ಮಂಡಿಸಿದ ತಿದ್ದುಪಡಿಯ ಆಧಾರವನ್ನು ಪ್ರಾಯೋಗಿಕವಾಗಿ ಒಳಗೊಂಡಿದೆ. ಆದರೆ ನನ್ನ ತಿದ್ದುಪಡಿಯನ್ನು ಅಂಗೀಕರಿಸಿದರೆ ನಿಯಮವು ಓದಲು ಚೆನ್ನಾಗಿ ಕಾಣುತ್ತದೆ.

**ಶ್ರೀ ಧೀರೇಂದ್ರ ನಾಥ್ ದತ್ತ** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ಸೋಮನಾಥ ಲಹಿರಿ ಅವರು ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸಲು ನಾನು ಎದ್ದು ನಿಂತಿದ್ದೇನೆ. ಈ ತಿದ್ದುಪಡಿಯಲ್ಲಿ ವ್ಯಕ್ತಪಡಿಸಿರುವ ಭಾವನೆಗಳ ಬಗೆಗೆ ನನಗೆ ಸಂಪೂರ್ಣವಾದ ಸಹಾನುಭೂತಿ ಇದೆ. ಆದರೆ ಶ್ರೀ ಲಹಿರಿ ಒಂದು ವಿಷಯವನ್ನು ಮರೆತಿದ್ದಾರೆ. ಇದು ಒಂದು ಸಲಹೆ ಕೊಡುವ ಸಮಿತಿಯಾಗಿದೆ. ಮೇ ೧೬ರ ಹೇಳಿಕೆಯ ೧೯ನೇ ಕಂಡಿಕೆಯ ಖಂಡ(೨) ಅನ್ನು ಪರಿಶೀಲಿಸಿದರೆ ಅದರಲ್ಲಿ ಹೀಗೆ ಹೇಳಲಾಗಿದೆ:

> "ಅಂತಿಮ ಸಂವಿಧಾನ ರಚನಾಸಭೆಯಲ್ಲಿ ರಾಜ್ಯಗಳಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡಬೇಕೆನ್ನುವುದು ಉದ್ದೇಶವಾಗಿದೆ. ಬ್ರಿಟಿಷ್ ಇಂಡಿಯಾದ ಅಂಗೀಕೃತ ಜನಸಂಖ್ಯೆಯ ಲೆಕ್ಕಾಚಾರವನ್ನು ಆಧರಿಸಿ ಅದು ೯೩ಅನ್ನು ಮೀರಬಾರದು. ಆದರೆ ಆಯ್ಕೆಯ ವಿಧಾನವನ್ನು ಸಮಾಲೋಚನೆಯ ಮೂಲಕ ತೀರ್ಮಾನಿಸಬೇಕು. ಪ್ರಾರಂಭದ ಹಂತದಲ್ಲಿ ಈ ರಾಜ್ಯಗಳು ಒಂದು ಸಂಧಾನ ಸಮಿತಿಯಿಂದ ಪ್ರತಿನಿಧಿಸಲ್ಪಡುತ್ತವೆ."

ಆದ್ದರಿಂದ ಆಯ್ಕೆಯ ವಿಧಾನವನ್ನು ಸಮಾಲೋಚನೆಯ ಮೂಲಕ ತೀರ್ಮಾನಿಸಬೇಕು, ಮತ್ತು

ಮಾನ್ಯ ಅಧ್ಯಕ್ಷರೆ, ಒಂದು ಸಲಹೆ ಕೊಡುವ ಸಮಿತಿ ಇರಬೇಕೆನ್ನುವುದಂತೂ ಸ್ಪಷ್ಟವಾಗಿದೆ. ರಾಜ್ಯಗಳು ಒಂದು ಸಂಧಾನ ಸಮಿತಿಯನ್ನು ನೇಮಕಮಾಡಿವೆ. ರಾಜ್ಯಗಳ ಈ ಸಂಧಾನ ಸಮಿತಿಯೊಡನೆ ಸಮಾಲೋಚಿಸಲು ನಾವು ಇನ್ನೊಂದು ಸಲಹಾ ಸಮಿತಿಯನ್ನು ನೇಮಿಸಲು ಬದ್ಧರಾಗಿದ್ದೇವೆ. ಸಂಖ್ಯೆಯನ್ನು ತೀರ್ಮಾನಿಸುವ ಮತ್ತು ವಿಧಾನವನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಇಡೀ ಸದನವೇ ಸಂಧಾನ ಸಮಿತಿಯೊಡನೆ ಸಮಾಲೋಚಿಸುತ್ತದೆ ಎನ್ನುವುದನ್ನು ನಂಬುವುದು ಅಸಾಧ್ಯ. ಆದ್ದರಿಂದ ಒಂದು ಸಲಹಾ ಸಮಿತಿಯನ್ನು ನೇಮಿಸಬೇಕಾದ್ದು ಆವಶ್ಯಕ ಮತ್ತು ಆ ಸಲಹಾ ಸಮಿತಿಯಲ್ಲಿ ಕೆಲವೇ ಜನ ಸದಸ್ಯರಬೇಕು. ಈ ತಿದ್ದುಪಡಿಯನ್ನು ನಾವು ಒಪ್ಪಿಕೊಂಡರೆ ಈ ನಿರ್ಣಯದ ಉದ್ದೇಶವೇ ನಿಷ್ಫಲವಾಗುತ್ತದೆ. ಏಕೆಂದರೆ ಈ ಸಮಾಲೋಚನೆಯು ಒಂದು ನಾವು ನೇಮಿಸಿದ ಮತ್ತು ಇನ್ನೊಂದು ರಾಜ್ಯಗಳು ನೇಮಿಸಿದ ಎರಡು ಚಿಕ್ಕ ಸಮಿತಿಗಳ ನಡುವೆ ನಡೆಯಬೇಕು. ಆದ್ದರಿಂದ ಮಾನ್ಯರೆ, ಶ್ರೀ ಲಹಿರಿ ಅವರು ಮಂಡಿಸಿದ ತಿದ್ದುಪಡಿಗಳಲ್ಲಿ ಅಂತರ್ಗತವಾಗಿರುವ ಭಾವನೆಗಳೊಡನೆ ನಾನು ಸಂಪೂರ್ಣವಾದ ಸಹಾನುಭೂತಿಯಿಂದಿದ್ದರೂ, ಅವರ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಈ ಕೆಲವು ಮಾತುಗಳೊಡನೆ ನಾನು ನನ್ನ ಮಿತ್ರರಾದ ಶ್ರೀ ಕೆ.ಎಮ್. ಮುನ್ಷಿ ಮಂಡಿಸಿದ ನಿರ್ಣಯವನ್ನು ಬೆಂಬಲಿಸುತ್ತೇನೆ ಮತ್ತು ಶ್ರೀ ಲಹಿರಿ ಅವರು ಮಂಡಿಸಿದ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

**ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರರಾದ ಶ್ರೀ ಲಹಿರಿ ಅವರಿಗೆ ತಮ್ಮ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಕಾರ್ಯವಿಧಾನ ಮತ್ತು ನಿಯಮಗಳ ಸಮಿತಿಯು ಮಾಡಿದ ಕಾರ್ಯದ ಒಂದು ಪ್ರತಿ ಅವರಿಗೆ ದೊರಕಿರಬೇಕೆಂದು ನಾನು ಭಾವಿಸುತ್ತೇನೆ. ಅದರಲ್ಲಿ ಸಮಿತಿಗಳು ಮಾಡುವ ಪ್ರತಿಯೊಂದು ಕಾರ್ಯವನ್ನೂ ಒಂದಲ್ಲ ಒಂದು ಹಂತದಲ್ಲಿ ಸದನಕ್ಕೆ ಸಲ್ಲಿಸಲಾಗುತ್ತದೆ ಎಂದು ಈಗಾಗಲೇ ಸೂಚಿಸಲಾಗಿದೆ. ಶಿಫಾರಸುಗಳನ್ನು ಅಂಗೀಕರಿಸುವುದು ಅಥವಾ ಬಿಡುವುದು ಈ ಸದನಕ್ಕೆ ಬಿಟ್ಟ ಸಂಗತಿ. ಹೀಗಿರುತ್ತ ಶ್ರೀ ಲಹಿರಿ ಅವರ ಅಂಶ ಈಡೇರಿದೆ ಎಂದು ಹೇಳಬಹುದು.

ದಲಿತವರ್ಗದ ಸದಸ್ಯರೊಬ್ಬರು– ದಲಿತವರ್ಗಗಳು ಮತ್ತು ಅನುಸೂಚಿತ ಜಾತಿಗಳು ಇವುಗಳ ನಡುವಣ ವ್ಯತ್ಯಾಸವೇನು ಎಂದು ನನಗೆ ತಿಳಿದಿಲ್ಲ– ಒಬ್ಬರು ದಲಿತ ಸದಸ್ಯರು ಈ ಸಮಿತಿಯಲ್ಲಿರಬೇಕು ಎಂದು ವಾದಿಸಿದ್ದಾರೆ. ನನಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ನಿರ್ಣಯದ ಕರ್ತೃ ಸೂಚಿಸಿರುವ ಹೆಸರುಗಳನ್ನು ಕುರಿತು ನನ್ನ ತಗಾದೆ ಏನೂ ಇಲ್ಲ. ಅವರು ಅಸಾಧಾರಣ ವ್ಯಕ್ತಿಗಳು. ಅವರು ರಾಜ್ಯಗಳಲ್ಲಿ ಕೆಲಸ ಮಾಡಿದವರು ಮತ್ತು ರಾಜ್ಯಗಳನ್ನು ಕುರಿತು ಬಲ್ಲವರು. ಆದರೆ ಮಾನ್ಯರೆ, ನಾನು ವಿನಮ್ರನಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಅವರು ಪೂರ್ವಭಾಗದ ರಾಜ್ಯಗಳನ್ನು ಕುರಿತು ಅಷ್ಟಾಗಿ ತಿಳಿದಿಲ್ಲ ಎಂದೂ ನಾನು ಭಾವಿಸುತ್ತೇನೆ. ಭಾರತೀಯ ರಾಜ್ಯಗಳ ಜನತಾ ಸಮಾವೇಶವು ಉತ್ತರ ಭಾರತ, ದಕ್ಷಿಣ ಭಾರತ, ಮತ್ತು ಪಶ್ಚಿಮ ಹಾಗೂ ಮಧ್ಯ ಭಾರತಗಳ ಕೆಲವು ಭಾಗಗಳನ್ನು ಕುರಿತು ಸಾಮಾನ್ಯವಾಗಿ ವ್ಯವಹರಿಸಿದೆ. ಆದರೆ ಅದು ಒರಿಸ್ಸಾ ರಾಜ್ಯದ ಏಜನ್ಸಿ ಅಥವಾ ಬಂಗಾಳ ಮತ್ತು ಈಶಾನ್ಯ ಗಡಿಪ್ರದೇಶಗಳ ಬಗೆಗೆ ಏನನ್ನೂ ಮಾಡಿಲ್ಲ. ನಾನು ಸ್ವಲ್ಪಮಟ್ಟಿಗೆ ನನ್ನದೇ ತುತ್ತೂರಿ ಊದಿಕೊಂಡರೆ ಸದನವು ನನ್ನನ್ನು ಕ್ಷಮಿಸಬೇಕು. ಬ್ರಿಟಿಷ್ ಪಶ್ಚಿಮ ಆಫ್ರಿಕದಿಂದ ನಾನು ಹಿಂತಿರುಗಿ ಬಂದಾಗಿನಿಂದ ಆದಿವಾಸಿಗಳ ಪ್ರದೇಶಗಳಲ್ಲಿ ಆದಿವಾಸಿಗಳ ನಡುವೆ ಸಂಚರಿಸುತ್ತಿದ್ದೇನೆ. ಕಳೆದ ಒಂಬತ್ತು ವರ್ಷಗಳಲ್ಲಿ ನಾನು ೧,೧೪,೦೦೦ ಮೈಲಿಗಳಷ್ಟು ಸಂಚರಿಸಿದ್ದೇನೆ. ಅದು ಈ ಆದಿವಾಸಿಗಳ ಅಗತ್ಯವೇನು ಮತ್ತು ಈ ಸದನವು ಅವರಿಗೆ ಏನನ್ನು ಮಾಡಬೇಕೆಂದು ನಿರೀಕ್ಷಿಸಲಾಗಿದೆ ಎಂಬ ಒಂದು ಕಲ್ಪನೆಯನ್ನು ನೀಡಿತು. ಅವರು ಭಾರತೀಯ ಭಾರತದಲ್ಲಿದ್ದಾರೆ, ರಾಜಸ್ಥಾನದಲ್ಲಿದ್ದಾರೆ, ರಾಜರ ಭಾರತದಲ್ಲಿದ್ದಾರೆ. ಅಲ್ಲಿನ ಜನಸಂಖ್ಯೆ ಒಂಬತ್ತು ಕೋಟಿ. ಅದರಲ್ಲಿ ೧.೭ ಕೋಟಿ ಆದಿವಾಸಿಗಳಿದ್ದಾರೆ, ೧.೭ ಕೋಟಿ ಬುಡಕಟ್ಟು ಜನರಿದ್ದಾರೆ. ಮಾನ್ಯರೆ, ಆದಿವಾಸಿಗಳ ಸಂಖ್ಯೆ ಇಷ್ಟು ಅಪಾರವಾಗಿರುವಾಗ ಈ

ಸಂಧಾನ ಸಮಿತಿಯಲ್ಲಿ ಒಬ್ಬರು ಆದಿವಾಸಿ ಸದಸ್ಯರು ಇರಬೇಕೆಂದು ನಾನು ಸಲಹೆ ನೀಡುತ್ತೇನೆ. ಅವರು ಸಮಿತಿಗೆ ಸಹಾಯಮಾಡುವಲ್ಲಿ ಸಮರ್ಥರಾಗುತ್ತಾರೆ ಎಂದು ನಾನು ಭಾವಿಸುತ್ತೇನೆ. ನಾನು ಸಮಿತಿಯ ಕೆಲಸಕ್ಕೆ ಅಡ್ಡಿಯುಂಟುಮಾಡುತ್ತಿಲ್ಲ. ಆದರೆ ಆದಿವಾಸಿಗಳ ಪರವಾಗಿ ಹೋರಾಡಲು ಒಬ್ಬರು ಆದಿವಾಸಿ ಅದರಲ್ಲಿ ಇರಬೇಕೆಂದು ಬಯಸುತ್ತೇನೆ. ಆದಿವಾಸಿಗಳ ಪರವಾಗಿ ನೀವು ಹೋರಾಡಬೇಕೆಂದರೆ ನಿಮಗೊಬ್ಬ ಆದಿವಾಸಿ ಬೇಕು. ಅವನು ಸಂಧಾನ ಸಮಿತಿಯ ಜೊತೆಯಲ್ಲಿ ಹೋರಾಡುತ್ತಾನೆ. ಮಾನ್ಯರೆ, ಈ ನಿರ್ಣಯದ ಮಂಡನೆಕಾರರಿಗೆ ಮತ್ತು ಕರ್ತೃಗಳಿಗೆ ನಾನು ಸಲಹೆ ಮಾಡುವುದೇನೆಂದರೆ ಅವರು ಒಬ್ಬ ಆದಿವಾಸಿಯನ್ನು ಸೇರಿಸಿಕೊಳ್ಳಬೇಕು ಮತ್ತು ಅದನ್ನು 'ನಾವು ಏಳುಮಂದಿ'ಯನ್ನಾಗಿ ಮಾಡಿಕೊಳ್ಳಬೇಕು.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ದಲಿತ ವರ್ಗದವರನ್ನು ಕುರಿತು ಅಥವಾ ಆದಿವಾಸಿಗಳನ್ನು ಕುರಿತು ನನ್ನ ಕಾಳಜಿಯಲ್ಲಿ ನಾನು ಯಾರಿಗೂ ಕಡಿಮೆಯಲ್ಲ. ಆದರೆ ಈ ಸಮಿತಿಯಲ್ಲಿ ಒಬ್ಬರು ಆದಿವಾಸಿಯೋ ಅಥವಾ ದಲಿತವರ್ಗದವರೋ ಅಥವಾ ಕ್ರೈಸ್ತರೋ ಅಥವಾ ಬೇರೆ ಯಾವುದೇ ಸಮುದಾಯದವರೋ ಪ್ರತಿನಿಧಿಯಾಗಿ ಇರಬೇಕೆಂದು ಒತ್ತಾಯ ಮಾಡುವುದು ಈ ನಿರ್ಣಯದ ಇಡೀ ಉದ್ದೇಶವನ್ನೇ ಮತ್ತು ಗುರಿಯನ್ನೇ ತಪ್ಪಾಗಿ ಅರ್ಥಮಾಡಿಕೊಂಡಂತೆ. ರಾಜರು ಒಂದು ಸಂಧಾನ ಸಮಿತಿಯನ್ನು ರಚಿಸುತ್ತಾರೆ. ರಾಜರ ಮಂಡಲಿಯ ಛಾನ್ಸಲರ್ ೧೯ನೇ ಜೂನ್, ೧೯೪೬ರಲ್ಲಿ ಬರೆದ ಪತ್ರದಲ್ಲಿ ೪ನೇ ಕಂಡಿಕೆಯನ್ನು ನೀವು ನೋಡಿದರೆ ಅದರಲ್ಲಿ ಹೀಗೆ ಹೇಳಿದೆ:

> "ಘನತೆವೆತ್ತ ತಮ್ಮ ಆಹ್ವಾನಕ್ಕೆ ಪ್ರತಿಕ್ರಿಯೆಯಾಗಿ ಸ್ಥಾಯಿಸಮಿತಿಯು ಒಂದು ಸಂಧಾನ ಸಮಿತಿಯನ್ನು ರಚಿಸಲು ನಿರ್ಧರಿಸಿದೆ. ಅದರ ಸಿಬ್ಬಂದಿಯನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ. ಘನತೆವೆತ್ತ ತಮ್ಮ ಅಪೇಕ್ಷೆಯಂತೆ ಸಂಖ್ಯೆಯನ್ನು ಕಡಿಮೆಯಾಗಿರಿಸಲು ಸಮಿತಿಯು ಯತ್ನಮೀರಿ ಶ್ರಮಿಸಿದೆ. ಆದರೆ ಆ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಸಮಿತಿಯು ಭಾವಿಸಿದೆ. ಸಮಿತಿಯು ಸಭೆಸೇರಬೇಕೆಂದು ನಿರೀಕ್ಷಿಸಲಾದ ಸಂಭಾವ್ಯ ಸಮಯ ಮತ್ತು ಸ್ಥಳವನ್ನು ಕುರಿತಂತೆ ಸಾಧ್ಯವಾದಷ್ಟು ಬೇಗ ತಿಳಿಸಿದರೆ ನಾನು ಕೃತಜ್ಞನಾಗಿರುತ್ತೇನೆ. ಹಾಗೆಯೇ ಸಂವಿಧಾನ ರಚನಾಸಭೆಯಲ್ಲಿ ಬ್ರಿಟಿಷ್ ಇಂಡಿಯಾದ ಪ್ರತಿನಿಧಿಗಳಿಂದ ಕೂಡಿದ ಸಂವಾದಿಯಾದ ಸಮಿತಿಯ ಸಿಬ್ಬಂದಿಯನ್ನು ತಿಳಿಸಬೇಕೆಂದು ಕೋರುತ್ತೇನೆ. ಈ ಸಂಧಾನಗಳ ಫಲಿತಾಂಶವನ್ನು ರಾಜರ ಸ್ಥಾಯಿ ಸಮಿತಿ, ಮಂತ್ರಿಮಂಡಲ ಮತ್ತು ಸಾಂವಿಧಾನಿಕ ಸಲಹಾ ಸಮಿತಿಗಳು ಪರಿಗಣಿಸಬೇಕೆಂದು ಉದ್ದೇಶಿಸಲಾಗಿದೆ. ಅವುಗಳ ಶಿಫಾರಸುಗಳನ್ನು ರಾಜರ ಮಹಾಮಂಡಲಿ ಮತ್ತು ರಾಜ್ಯಗಳ ಪ್ರತಿನಿಧಿಗಳ ಮುಂದೆ ಇರಿಸಲಾಗುವುದು."

ನಾವು ಈಗ ಈ ನಿರ್ಣಯದ ಷರತ್ತುಗಳು ಏನು ಹೇಳುತ್ತವೆಂದು ನೋಡೋಣ :

> "ಪರಿಮಿತ ಉದ್ದೇಶಗಳಿಗೆ, ಅಂದರೆ ವಿಧಾಯಕ ಸಭೆಯಲ್ಲಿ ೯೩ಕ್ಕೆ ಮೀರದಂತೆ ಸ್ಥಾನಗಳ ಹಂಚಿಕೆಯನ್ನು ತೀರ್ಮಾನಿಸಲು ಮತ್ತು ಎರಡನೆಯದಾಗಿ ರಾಜ್ಯದ ಪ್ರತಿನಿಧಿಗಳು ಹೇಗೆ ಈ ಸಭೆಗೆ ಆಯ್ಕೆಯಾಗಿ ಬರಬೇಕು ಎಂಬ ವಿಧಾನವನ್ನು ನಿರ್ಧರಿಸಲು, ರಾಜರ ಮಂಡಲಿಯು ರಚಿಸಿದ ಸಂಧಾನ ಸಮಿತಿಯೊಡನೆ ಮತ್ತು ಭಾರತದ ರಾಜ್ಯಗಳ ಪ್ರತಿನಿಧಿಗಳೊಡನೆ ಸಮಾಲೋಚಿಸಲು ಈ ಸಮಿತಿಯನ್ನು ರಚಿಸಬೇಕು."

ಆದ್ದರಿಂದ ಮಾನ್ಯರೆ, ಈವರೆಗೆ ಬ್ರಿಟಿಷ್ ಇಂಡಿಯಾ ಅಷ್ಟೇ ಅಲ್ಲದೆ ಭಾರತದ ಭಾರತದ ಜನರ ಅತ್ಯುತ್ತಮ ಹಿತಾಸಕ್ತಿಗಳಲ್ಲೂ ಆಸಕ್ತಿಯನ್ನು ತೋರಿಸಿದವರನ್ನು ನಾವು ಈಗ ಬ್ರಿಟಿಷ್ ಇಂಡಿಯಾದ ಪರವಾಗಿ ಚುನಾಯಿಸಬೇಕು. ಪಂಡಿತ್ ಜವಾಹರಲಾಲ್ ನೆಹರು ಇದ್ದಾರೆ, ಅವರು ರಾಜ್ಯಗಳ ಜನತಾ ಸಮಾವೇಶದ ಅಧ್ಯಕ್ಷರು; ಡಾ. ಪಟ್ಟಾಭಿ ಸೀತಾರಾಮಯ್ಯ ಇದ್ದಾರೆ, ಶಂಕರರಾವ್ ದೇವ್ ಇದ್ದಾರೆ ಮತ್ತು ಇತರರು

ಇದ್ದಾರೆ. ಈಗ, ಒಂದು ತಿದ್ದುಪಡಿಯ ಮಂಡನೆಕಾರರು ಹೇಳಿದ್ದು ಏನೆಂದರೆ ರಾಜ್ಯಗಳಲ್ಲಿ ದಲಿತವರ್ಗಗಳಿಗೆ ಸೇರಿದವರು ನೆಲೆಸಿದ್ದಾರೆ, ಅವರಿಗೆ ಸಮಿತಿಯಲ್ಲಿ ಪ್ರಾತಿನಿಧ್ಯ ಇರಬೇಕು. ಅದು ಹಾಗಾದರೆ ಸಿಖ್ಖರು, ಭಾರತೀಯ ಕ್ರೈಸ್ತರು ಮತ್ತು ಆಂಗ್ಲೊ ಇಂಡಿಯನ್ನರು ಕೂಡ ರಾಜ್ಯಗಳಲ್ಲಿ ನೆಲೆಸಿದ್ದಾರೆ. ರಾಜ್ಯದ ಪ್ರತಿನಿಧಿಗಳಿಗೆ ಈ ಸದನದಲ್ಲಿ ಪ್ರಾತಿನಿಧ್ಯವನ್ನು ನೀಡುವ ವಿಧಾನವನ್ನು ನಿರ್ಧರಿಸುವ ಒಂದು ನಿಕಾಯವಷ್ಟೇ ಈ ಸಮಿತಿ, ಈ ಪರಿಮಿತ ಉದ್ದೇಶಕ್ಕಾಗಿ ಕೋಮುವಾರು ಪ್ರಾತಿನಿಧ್ಯದ ತತ್ತ್ವವನ್ನು ತರಬೇಕಾದ ಆವಶ್ಯಕತೆ ಇಲ್ಲ. ಈ ನಿರ್ಣಯದ ಪದವಿನ್ಯಾಸವು ಸ್ಪಷ್ಟಪಡಿಸುವುದೇನೆಂದರೆ ನಮ್ಮ ಸಮಿತಿಯು ಸಂಧಾನ ಸಮಿತಿಯೊಡನೆ ಸಮಾಲೋಚಿಸುತ್ತದೆ. ಈ ನಿರ್ಣಯದ ಮಂಡನೆಕಾರರು ಸ್ಪಷ್ಟಪಡಿಸಿರುವುದೇನೆಂದರೆ ಸಂಧಾನಗಳ ಫಲಿತಾಂಶಗಳು ಅಂತಿಮ ಒಪ್ಪಿಗೆಗಾಗಿ ಈ ಸದನದ ಮುಂದೆ ಬರುತ್ತವೆ. ಆದ್ದರಿಂದ ನಾನು, ಶ್ರೀ ಸಂತಾನಮ್ ಅವರೂ ಸೇರಿದಂತೆ, ಈ ತಿದ್ದುಪಡಿಗಳ ಮಂಡನೆಕಾರರು ತಮ್ಮ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕೋರುತ್ತೇನೆ. ಸಮಿತಿಯ ವ್ಯಾಪ್ತಿಯು ಇಷ್ಟು ಪರಿಮಿತವಾಗಿದೆ. ಕೋಮುವಾರು ಪ್ರಾತಿನಿಧ್ಯಗಳು ಮುಂತಾದ ಇತರ ಪರಿಗಣನೆಗಳು ನನ್ನ ದೃಷ್ಟಿಯಲ್ಲಿ ಮುಖ್ಯ ಉದ್ದೇಶದ ಮೇಲೆ ಪರಿಣಾಮ ಬೀರಲಾರವು. ಅತ್ಯಂತ ಕಡಿಮೆ ಜನಸಂಖ್ಯೆಯ ಕೆಲವು ರಾಜ್ಯಗಳು ಇರಬಹುದು. ಅಂತಹವುಗಳ ಗುಂಪನ್ನು ಪ್ರತಿನಿಧಿಸಲು ಕೇವಲ ಒಬ್ಬನೇ ಒಬ್ಬ ಪ್ರತಿನಿಧಿ ಇರಬಹುದು. ೬೫೦ ರಾಜ್ಯಗಳಿವೆ ಎಂದು ನಮಗೆ ಗೊತ್ತು. ಆದರೆ ೬೫೦ ಪ್ರತಿನಿಧಿಗಳು ಇರಬೇಕು ಎಂದು ನಾವು ನಿರೀಕ್ಷಿಸುವಂತಿಲ್ಲ. ಈ ಎಲ್ಲ ರಾಜ್ಯಗಳಿಗೆ ಯುಕ್ತವಾದ ಪ್ರಾತಿನಿಧ್ಯವನ್ನು ಕೊಡುವ ಉದ್ದೇಶಕ್ಕಾಗಿ ಈ ಸಮಿತಿಯನ್ನು ರಚಿಸಲಾಗಿದೆ, ಅವರ ವಿವೇಚನೆಗೆ ಅಡ್ಡಿಯುಂಟುಮಾಡುವುದು ಸರಿಯಲ್ಲ ಮತ್ತು ಈ ತಿದ್ದುಪಡಿಗಳನ್ನು ಮಂಡಿಸಿದವರನ್ನು ಹಿಂತೆಗೆದುಕೊಳ್ಳುವಂತೆ ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ಮಂಡಿಸಿದ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ ಮತ್ತು ಅದು ಸರ್ವಾನುಮತದಿಂದ ಅಂಗೀಕಾರವಾಗುತ್ತದೆಂದು ಆಶಿಸುತ್ತೇನೆ.

**ಶ್ರೀ ಕೆ. ಸಂತಾನಮ್ :** ಈ ಸಮಿತಿಯ ಪ್ರಸ್ತಾವಗಳು ಈ ಸದನದ ಮುಂದೆ ಸ್ಥಿರೀಕರಣಕ್ಕೆ ಬರುತ್ತವೆ ಎಂದು ಅಧ್ಯಕ್ಷರು ನಿರ್ಣಯವನ್ನು ಕೊಟ್ಟರೆ ನಾನು ಸಂತೋಷದಿಂದ ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು :** ಪಂಡಿತ್ ಜವಾಹರಲಾಲ್ ನೆಹರು.

**ಶ್ರೀ ಸೋಮನಾಥ ಲಹಿರಿ :** ಮಾನ್ಯರೆ, ಈ ಸಮಿತಿಯ ಪ್ರಸ್ತಾವಗಳು ಸ್ಥಿರೀಕರಣಕ್ಕೆ ಬದ್ಧವಾಗಿವೆ ಎಂದು ನೀವು ನಿರ್ಣಯ ಕೊಡಬಲ್ಲಿರಾದರೆ ನಾನು ಕೂಡ ನನ್ನ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು :** ನಾನು ನನ್ನ ನಿರ್ಣಯವನ್ನು ಸಕಾಲದಲ್ಲಿ ನೀಡುತ್ತೇನೆ. ಪಂಡಿತ್ ಜವಾಹರಲಾಲ್ ನೆಹರು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಶ್ರೀ ಮುನ್ಷಿ ಈ ಸದನದ ಮುಂದೆ ಮಂಡಿಸಿರುವ ನಿರ್ಣಯವು ಬಹಳ ಪರಿಮಿತವಾದ ಒಂದು ನಿರ್ಣಯ. ರಾಜ್ಯದ ಪ್ರತಿನಿಧಿಗಳಿಗೆ ಈ ಸಭೆಯಲ್ಲಿ ಪ್ರಾತಿನಿಧ್ಯವನ್ನು ನೀಡುವ ವಿಧಾನವನ್ನು ನಿಗದಿಪಡಿಸುವುದಕ್ಕಷ್ಟೇ ಅದು ಉದ್ದಿಷ್ಟವಾಗಿದೆ, ಮತ್ತು ರಾಜ್ಯಗಳು ಉಳಿದ ಸಮಸ್ತ ಭಾರತದೊಡನೆ ಸಾಮಾನ್ಯವಾಗಿ ಹೊಂದಿರುವ ಅಸಂಖ್ಯಾತ ಸಮಸ್ಯೆಗಳನ್ನು ಕುರಿತು ವ್ಯವಹರಿಸುವುದಕ್ಕಲ್ಲ. ರಾಜಕೀಯ ಹೋರಾಟಗಳು ನಡೆಯುತ್ತಿರುವ ಒಂದೆರಡು ರಾಜ್ಯಗಳನ್ನು ಕುರಿತು ಶ್ರೀ ಲಹಿರಿ ಪ್ರಸ್ತಾವಿಸಿದ್ದಾರೆ. ಈ ಸಮಿತಿಯು ರಾಜ್ಯಗಳ ಅಂತರಂಗದ ಸಂರಚನೆಯನ್ನು ಕುರಿತು ಏನನ್ನೂ ಮಾಡುವುದಲ್ಲ ಎನ್ನುವುದು ಸುಸ್ಪಷ್ಟ. ರಾಜ್ಯಗಳ ಪ್ರತಿನಿಧಿಗಳು ಬಂದಾಗ, ಆ ವಿಷಯವನ್ನು ಪರಿಗಣಿಸಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ಅವರೊಡನೆ ಸಮಾಲೋಚಿಸಿ, ಚರ್ಚಿಸಿ ಈ ವಿಷಯಗಳನ್ನು ಇತ್ಯರ್ಥ ಮಾಡಬಹುದು. ಆದ್ದರಿಂದ ಪ್ರಸ್ತುತ ನಾವು ಅವರ ಪ್ರಾತಿನಿಧ್ಯದ

ವಿಧಾನವನ್ನು ಮಾತ್ರ ಪರಿಗಣಿಸುವ ಕಾರ್ಯವನ್ನು ಹೊಂದಿದ್ದೇವೆ.

ಈಗ, ಮಾನ್ಯರೆ, ದಲಿತವರ್ಗ ಮತ್ತು ಆದಿವಾಸಿ ಸದಸ್ಯರನ್ನು ಸೇರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮಂಡಿಸಲಾಗಿರುವ ಈ ತಿದ್ದುಪಡಿಗಳು, ನಾವು ಈ ಪರಿಮಿತ ಸಮಸ್ಯೆಯನ್ನು ಮಾತ್ರ ಪರಿಗಣಿಸುತ್ತಿದ್ದೇವೆ ಎಂಬ ವಾಸ್ತವಾಂಶವನ್ನು ಕಡೆಗಣಿಸಿದಂತೆ ತೋರುತ್ತದೆ. ದಲಿತವರ್ಗದವರು ಸಂರಕ್ಷಿಸಿಕೊಳ್ಳಬೇಕಾದ ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿದ್ದಾರೆ ಎನ್ನುವುದು ಸುಸ್ಪಷ್ಟ. ಆದರೆ ಆ ಸಮಸ್ಯೆಯು ಈ ಸಮಿತಿಯ ಮುಂದೆ ಬರುವುದಿಲ್ಲ. ರಾಜ್ಯಗಳಲ್ಲದ ಭಾರತದ ಭಾಗವನ್ನು ಈ ಸಮಿತಿಯು ಪ್ರತಿನಿಧಿಸುತ್ತದೆ ಎಂದು ನಾನು ಹೇಳಬಹುದೇನೋ. ಇದು ರಾಜರ ಪ್ರತಿನಿಧಿಗಳನ್ನು ಭೇಟಿ ಮಾಡುತ್ತದೆ. ಮುಚ್ಚುಮರೆಯಿಲ್ಲದೆ ನಾನು ಹೇಳಬಹುದಾದರೆ ನಾವು ರಾಜರ ಸಂಧಾನ ಸಮಿತಿಯನ್ನು ಭೇಟಿ ಮಾಡಬೇಕಾಗುತ್ತದೆ. ಈ ಸಂಧಾನ ಸಮಿತಿಯಲ್ಲಿ ರಾಜ್ಯದ ಪ್ರಜೆಗಳ ಪ್ರತಿನಿಧಿಗಳು ಇರಬೇಕಾಗಿತ್ತು ಎಂದು ನಾನು ಭಾವಿಸುತ್ತೇನೆ. ಈಗಲೂ ಕೂಡ ಈ ಸಂಧಾನ ಸಮಿತಿಯು ಯುಕ್ತವಾದುದನ್ನು ಮಾಡಬೇಕೆಂದು ಬಯಸಿದರೆ ಅಂತಹ ಕೆಲವು ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು. ಆದರೆ ಈ ಹಂತದಲ್ಲಿ ನಾವು ಅದಕ್ಕಾಗಿ ಒತ್ತಾಯ ಮಾಡಲಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಈ ವಿಚಾರವನ್ನು ಕುರಿತು ಸಂಧಾನ ಮಾಡಲು ನಾವು ಒಂದು ಸಮಿತಿಯನ್ನು ನೇಮಿಸದಿದ್ದರೆ ರಾಜ್ಯದ ಪ್ರತಿನಿಧಿಗಳ ಯುಕ್ತವಾದ ಪ್ರಾತಿನಿಧ್ಯವನ್ನು ದೊರಕಿಸಿಕೊಳ್ಳಲು ಸಾಧ್ಯವಾಗದೇ ಇರಬಹುದು. ಆದ್ದರಿಂದ ರಾಜರ ಮಂಡಲಿಯು ರಚಿಸಿದ ಸಂಧಾನ ಸಮಿತಿಯನ್ನು ಭೇಟಿಮಾಡುತ್ತೇವೆ ಎಂದಷ್ಟೇ ಅಲ್ಲದೆ ಪ್ರಾಯಃ ಅದರಲ್ಲಿ ಸೇರಿಲ್ಲದಿರುವ ಇತರ ರಾಜ್ಯಗಳ ಪ್ರತಿನಿಧಿಗಳನ್ನೂ ಭೇಟಿಮಾಡುತ್ತೇವೆ ಎಂದು ಈ ನಿರ್ಣಯದಲ್ಲಿ ನಾವು ಹೇಳಿದ್ದೇವೆ. ನಾನು ಈಗಾಗಲೇ ವಿವರಿಸಿರುವಂತೆ ಅವರನ್ನು ನಾವು ಭೇಟಿಮಾಡುವ ಉದ್ದೇಶವು ರಾಜ್ಯಗಳ, ಜನರ ಪ್ರಾತಿನಿಧ್ಯಕ್ಕೆ ಸೂಕ್ತವಾದ ವಿಧಾನವನ್ನು ಖಚಿತಪಡಿಸಿಕೊಳ್ಳುವುದು. ಹೀಗಿರುವಾಗ, ರಾಜ್ಯಗಳು ಈಗಿರುವ ಸ್ಥಿತಿಯನ್ನು ಕುರಿತು ಯೋಚಿಸಲು ಪ್ರಯತ್ನಿಸಿದರೆ, ಕೆಲವು ರಾಜ್ಯಗಳು ದೊಡ್ಡದಾಗಿವೆ, ಅವುಗಳನ್ನು ಹೊರತುಪಡಿಸಿದರೆ ಇನ್ನು ಕೆಲವು ಚಿಕ್ಕದಾಗಿದ್ದು ಅವುಗಳಿಗೆ ನಾವು ಪ್ರಾತಿನಿಧ್ಯವನ್ನು ಕೊಡಬೇಕೆಂದರೆ ಒಂದು ರೀತಿಯ ಗುಂಪುಗೂಡಿಸುವಿಕೆಯನ್ನು ಅಥವಾ ಅವರಿಗೆ ಪ್ರಾತಿನಿಧ್ಯವನ್ನು ಕೊಡುವ ಬೇರೆ ಯಾವುದೋ ರೀತಿಯ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಏಕೆಂದರೆ ಪ್ರತಿಯೊಂದು ರಾಜ್ಯಕ್ಕೂ ನಾವು ಒಬ್ಬ ಪ್ರತಿನಿಧಿಯನ್ನು ಕೊಡಲು ಸಾಧ್ಯವಾಗದಿರಬಹುದು. ಎಷ್ಟು ರಾಜ್ಯಗಳಿವೆ ನೋಡಿ, ಎಷ್ಟಕ್ಕೆ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಹೈದಾರಾಬಾದ್ ಮತ್ತು ಕಾಶ್ಮೀರದಂತಹ ರಾಜ್ಯಗಳಿಗೆ ಜನಸಂಖ್ಯೆಯ ಆಧಾರದ ಮೇಲೆ ಸಮರ್ಪಕವಾದ ಪ್ರಾತಿನಿಧ್ಯ ಸಿಗುತ್ತದೆ. ಕೆಲವು ದೊಡ್ಡರಾಜ್ಯಗಳಿಗೆ ಎರಡು, ಮೂರು ಅಥವಾ ನಾಲ್ಕು ಕೂಡ ದೊರೆಯಬಹುದು. ಆದರೆ ಬಹುಪಾಲು ರಾಜ್ಯಗಳಿಗೆ ಕೇವಲ ಒಂದು ಸ್ಥಾನ ಸಿಗಬಹುದೇನೋ. ಆದರೆ ಅವುಗಳಲ್ಲಿ ಅನೇಕ ರಾಜ್ಯಗಳಿಗೆ ಆ ಒಂದು ಸ್ಥಾನವೂ ಸಿಗದಿರಬಹುದು. ನಾವು ಅವುಗಳನ್ನು ಗುಂಪುಗೂಡಿಸಬೇಕು ಅಥವಾ ಬೇರೆ ಯಾವುದಾದರೂ ವಿಧಾನವನ್ನು ರೂಪಿಸಬೇಕು. ಇವು ನಮ್ಮ ಸಮಸ್ಯೆಗಳು. ಇವುಗಳನ್ನು ಬಿಟ್ಟರೆ ಯಾವುದೇ ನಿರ್ದಿಷ್ಟ ವರ್ಗದ ಮೇಲೆ ಪರಿಣಾಮ ಬೀರುವ ಬೇರೆ ಯಾವುದೇ ಸಮಸ್ಯೆ ಅಥವಾ ರಾಜ್ಯಗಳ ಆಂತರಿಕ ಸಂರಚನೆಯ ಮೇಲೆ ಪರಿಣಾಮ ಬೀರುವ ಸಮಸ್ಯೆ ಈ ಸಮಿತಿಯ ಮುಂದೆ ಬರುವುದಿಲ್ಲ. ರಾಜ್ಯದ ಪ್ರತಿನಿಧಿಗಳೂ ಇಲ್ಲಿಗೆ ಬಂದಮೇಲೆ, ಮುಂದಿನ ಹಂತದಲ್ಲಿ ಈ ಸಮಸ್ಯೆಗಳು ಈ ಸಭೆಯ ಮುಂದೆ ಬರಬೇಕಾಗುತ್ತವೆ.

ಯಾವುದೇ ನಿರ್ದಿಷ್ಟವಾದ ಗುಂಪಿನ–ಕೋಮುವಾರಿನ, ಪ್ರಾಂತೀಯ ಅಥವಾ ರಾಜ್ಯದ–ಪ್ರಶ್ನೆಯು ಈ ಸಮಿತಿಯ ಮುಂದೆ ಬರುವ ಸಂಭವವು ಉದ್ಭವಿಸುವುದಿಲ್ಲ ಎಂದು ಅರಿಕೆಮಾಡಿಕೊಳ್ಳುತ್ತೇನೆ. ಸಹಜವಾಗಿಯೇ ಇಲ್ಲಿರುವ ಸಮರ್ಥ ಜನರನ್ನು ನಾವು ತೆಗೆದುಕೊಳ್ಳಬೇಕು. ಆದರೆ ಈ ನಿರ್ದಿಷ್ಟವಾದ ವಿಷಯದಲ್ಲಿ ಗುಂಪಿನ ಪ್ರಾತಿನಿಧ್ಯವನ್ನು ಬಯಸುವಂತಿಲ್ಲ. ಏಕೆಂದರೆ ಹಾಗೆ ನಾವು ಮಾಡಿದರೆ ಇಲ್ಲಿರುವ

ಅನೇಕ ಪ್ರತ್ಯೇಕ ಆಸಕ್ತಿಗಳಿಗೆ ನಾವು ಏಕೆ ಪ್ರಾತಿನಿಧ್ಯವನ್ನು ನಿರಾಕರಿಸಬೇಕು ಎನ್ನುವುದಕ್ಕೆ ನಿರ್ದಿಷ್ಟವಾದ ಕಾರಣವೇನೂ ಇಲ್ಲ. ನೀವು ತಿರುವನಂತಪುರ ರಾಜ್ಯವನ್ನು ತೆಗೆದುಕೊಂಡರೆ ಧಾರ್ಮಿಕ ದೃಷ್ಟಿಯಿಂದ ನೋಡಿದರೂ ರಾಜ್ಯದ ಜನಸಂಖ್ಯೆಯಲ್ಲಿ ಬಹುಪಾಲು ಕ್ರೈಸ್ತರಾಗಿರುವುದು –ರೋಮನ್ ಕ್ಯಾಥೊಲಿಕ್ ಆಗಿರುವುದು ಕಂಡುಬರುತ್ತದೆ. ಈಗ, ತಿರುವನಂತಪುರವು ಒಂದು ಪ್ರಮುಖವಾದ ರಾಜ್ಯವಾಗಿದ್ದು ಅಲ್ಲಿನ ಜನರು ಪದೇ ಪದೇ ಸರ್ಕಾರದ ವಿಧಾಯಕ ಶಕ್ತಿಗಳೊಡನೆ ಸಂಘರ್ಷಕ್ಕೆ ಇಳಿಯುತ್ತಾರೆ. ಸಹಜವಾಗಿಯೇ ಕಾಶ್ಮೀರವು ಇನ್ನೊಂದು ಮುಖ್ಯವಾದ ರಾಜ್ಯ. ಈ ರೀತಿಯಲ್ಲಿ ಈ ಚಿಕ್ಕ ಸಮಿತಿಯಲ್ಲಿ ಕೋಮುವಾರು ಆಧಾರದ ಮೇಲೆ ಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ನಿವು ಯೋಚಿಸಿದರೆ ಅಗಾಧವಾದ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಿ. (ನಿಸ್ಸಂಶಯವಾಗಿ ಈ ಸಮಿತಿಯು ಒಂದು ಚಿಕ್ಕ ಸಮಿತಿಯಾಗಿರಬೇಕಾಗುತ್ತದೆ. ಏಕೆಂದರೆ, ಅದು ದೊಡ್ಡಸಮಿತಿಯಾಗಿದ್ದರೆ ರಾಜರ ಪ್ರತಿನಿಧಿಗಳೊಂದಿಗೆ ವ್ಯವಹರಿಸುವುದು ಬಹಳ ಕಷ್ಟವಾಗುತ್ತದೆ.) ಆದ್ದರಿಂದ ಈ ಸಮಿತಿಯನ್ನು, ಕೆಲವರು ಸಲಹೆಕೊಟ್ಟಂತೆ, ಪ್ರತ್ಯೇಕ ಹಿತಾಸಕ್ತಿಗಳ ಆಧಾರದ ಮೇಲೆ ರಚಿಸಬಾರದು.

ಈಗ, ಶ್ರೀ ಜೈಪಾಲ್ ಸಿಂಗ್ ಒಂದು ಹೇಳಿಕೆಯನ್ನು ನೀಡಿದರು. ಆ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿರಲು ಅನುಮತಿ ಕೋರುತ್ತೇನೆ. ರಾಜ್ಯಗಳ ಜನತಾ ಅಧಿವೇಶನವು ಒರಿಸ್ಸಾ ರಾಜ್ಯಗಳ ವಿಚಾರದಲ್ಲಿ ಸಾಕಷ್ಟು ಆಸಕ್ತಿಯನ್ನು ತೋರಿಸುತ್ತಿಲ್ಲ ಎನ್ನುವುದು ಅವರ ಹೇಳಿಕೆ. ರಾಜ್ಯಗಳ ಜನತಾ ಅಧಿವೇಶನವು ತಾನು ಏನನ್ನು ಮಾಡಬೇಕೋ ಅದನ್ನೆಲ್ಲ ಮಾಡಿಲ್ಲ. ಏಕೆಂದರೆ, ಸಮಸ್ಯೆಯು ಅಷ್ಟು ಅಗಾಧವಾದದ್ದು. ವಾಸ್ತವಾಂಶವೇನೆಂದರೆ ಒರಿಸ್ಸಾ ರಾಜ್ಯಗಳು ಪದೇ ಪದೇ ರಾಜ್ಯಗಳ ಜನತಾ ಅಧಿವೇಶನದ ಮುಂದೆ ಬಂದಿವೆ. ರಾಜ್ಯಗಳ ಜನತಾ ಅಧಿವೇಶನದ ಸ್ಥಾಯಿಸಮಿತಿಯ ನಮ್ಮ ಸದಸ್ಯರಲ್ಲೊಬ್ಬರು ಅಲ್ಲಿಂದಲೇ ಬಂದಿದ್ದಾರೆ.

ಈಗ ಶ್ರೀ ಸಂತಾನಮ್ ಮತ್ತು ಬೇರೆಯವರು ಮಂಡಿಸಿದ ಕೆಲವು ತಿದ್ದುಪಡಿಗಳು 'ಈ ಅಂತಿಮ ಅಧಿಕಾರವು ಈ ಸದನದಲ್ಲೇ ಉಳಿದಿರಬೇಕು' ಎಂದು ಹೇಳುತ್ತವೆ. ಈ ವಿಚಾರದಲ್ಲಿ ಅಧ್ಯಕ್ಷಪೀಠವು ಒಂದು ನಿರ್ಣಯವನ್ನು ಕೊಡುವಂತಿದ್ದರೆ ಅವುಗಳನ್ನು ಹಿಂತೆಗೆದುಕೊಳ್ಳಲು ಅವರು ಒಪ್ಪಿದ್ದಾರೆ. ಅಂತಹ ವಿಷಯಗಳಲ್ಲಿ ಅಂತಿಮ ತೀರ್ಮಾನದ ಹಕ್ಕು ಈ ಸದನಕ್ಕೇ ಇರುತ್ತದೆ ಎನ್ನುವುದನ್ನು ಕುರಿತು ನನ್ನ ಮನದಲ್ಲಿ ಯಾವ ಅನುಮಾನವೂ ಇಲ್ಲ. ಈ ಸಮಿತಿಯು ಕೇವಲ ಒಂದು ಸಂಧಾನ ಸಮಿತಿಯಾಗಿರಬೇಕು. ಅದು ಸಂಧಾನಮಾಡಿ ಈ ಸದನಕ್ಕೆ ವರದಿಮಾಡಬೇಕು. ಅವರು ಮಾಡಿದ ಯಾವುದನ್ನಾದರೂ ಈ ಸದನವು ಒಪ್ಪದಿದ್ದರೆ ಅವರು ಹಿಂದಕ್ಕೆ ಹೋಗಿ ಮತ್ತಷ್ಟು ಸಂಧಾನ ಮಾಡಬೇಕು. ಅಂತಹ ಎಲ್ಲ ವಿಚಾರಗಳಲ್ಲಿ ಸಹಜವಾಗಿಯೇ ಒಂದಿಷ್ಟು ವಿವೇಚನೆಯನ್ನು ನೀಡಲಾಗಿರುತ್ತದೆ. ಉದಾಹರಣೆಗೆ, ನಿಮ್ಮ ಪೂರ್ಣಾಧಿಕಾರಿ ರಾಯಭಾರಿಗೆ ಇತರ ದೇಶಗಳಿಗೆ ಹೋಗಿ ಸಂಧಾನವನ್ನು ನಡೆಸಲು ನೀವು ಅಪಾರವಾದ ಅಧಿಕಾರವನ್ನು ಕೊಡುತ್ತೀರಿ. ದೇಶಗಳಿಗೆ ಅಂಗೀಕರಿಸುವ ಅಥವಾ ನಿರಾಕರಿಸುವ ಹಕ್ಕು ಇರುತ್ತದೆ. ಆದರೆ ಸಾಮಾನ್ಯವಾಗಿ ಹೇಳುವುದಾದರೆ, ಎರಡು ಪಕ್ಷಗಳ ಪ್ರತಿನಿಧಿಗಳು ಒಟ್ಟಿಗೆ ಸೇರಿ ಒಂದು ವಿಚಾರವನ್ನು ಚರ್ಚಿಸಿ ಒಂದು ಸಹಮತಿಗೆ ಬಂದರೆ, ಪ್ರಮುಖವಾದ ತತ್ತ್ವವೇನೂ ಅದರಲ್ಲಿಲ್ಲದಿದ್ದರೆ, ಆ ಸಹಮತಿಯನ್ನು ಒಪ್ಪಿಕೊಳ್ಳಲಾಗುತ್ತದೆ. ಏಕೆಂದರೆ ಮೂರನೆಯ ಕಕ್ಷಿಗಳು ಅದರಲ್ಲಿ ಆಸಕ್ತರಾಗಿರುತ್ತಾರೆ. ನಮ್ಮ ವಿಚಾರದಲ್ಲೂ ಅದು ಅನ್ವಯವಾಗುತ್ತದೆ. ಆದರೆ ನಾನು ಸಲಹೆ ಕೊಡುವುದೇನೆಂದರೆ, ಸಾಧ್ಯವಾದರೆ – ನನ್ನ ಮುಂದೆ ನಿರ್ಣಯದ ಪಠ್ಯವಿಲ್ಲ– ಸಮಿತಿಯು ಈ ಸದನಕ್ಕೆ ಹಾಜರಾಗಿ ವರದಿ ಸಲ್ಲಿಸಬೇಕು ಎಂಬಂತಹ ಶಬ್ದಗಳನ್ನು ಸೇರಿಸುವುದು ಸಾಧ್ಯವಾಗುತ್ತಿದ್ದಿರಬಹುದು.

**ಶ್ರೀ ಅಜಿತ್ ಪ್ರಸಾದ್ ಜೈನ್** (ಸಂಯುಕ್ತ ಸಂಸ್ಥಾನಗಳು : ಸಾಮಾನ್ಯ) : ನಾನು ಒಂದು ಪ್ರಶ್ನೆಯನ್ನು ಕೇಳಬಹುದೆ? ಈ ನಿರ್ಣಯವು ಮೂರು ನಿಕಾಯಗಳನ್ನು ಕಲ್ಪಿಸಿಕೊಳ್ಳುತ್ತದೆ: ಈ ಸದನವು ರಚಿಸಿದ

ಒಂದು ಸಂಧಾನ ಸಮಿತಿ, ರಾಜರು ನೇಮಿಸಿದ ಇನ್ನೊಂದು ಸಂಧಾನ ಸಮಿತಿ (ಅವರ ಹೆಸರುಗಳನ್ನು ಪ್ರಕಟಿಸಲಾಗಿದೆ), ಮತ್ತು ಮೂರನೆಯದು ರಾಜ್ಯಗಳ ಇತರ ಪ್ರತಿನಿಧಿಗಳು. ಈ ನಿಕಾಯಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಮತ್ತು ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುತ್ತವೆ? ಉದಾಹರಣೆಗೆ ರಾಜರು ಒಂದು ನಿಲುವನ್ನು ತಾಳಿ, ರಾಜ್ಯಗಳ ಇತರ ಪ್ರತಿನಿಧಿಗಳು ಇನ್ನೊಂದು ನಿಲುವನ್ನು ತಾಳಿ, ಸಂಧಾನ ಸಮಿತಿಯು ಮತ್ತೊಂದು ನಿಲುವನ್ನು ತಾಳಿದರೆ ಅವರೆಲ್ಲ ಹೇಗೆ ಕೆಲಸ ಮಾಡುತ್ತಾರೆ?

**ಮಾನ್ಯ ಅಧ್ಯಕ್ಷರು :** ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವುದು ಸಂಧಾನ ಸಮಿತಿಯ ಕಾರ್ಯ ಎಂದು ನಾನು ಭಾವಿಸುತ್ತೇನೆ. ಈ ಸಮಿತಿ ಮತ್ತು ನೀವು ಹೇಳಿದ ಇನ್ನೊಂದು ಸಮಿತಿ ಆ ರೀತಿಯಲ್ಲಿ ಕೆಲಸ ಮಾಡುತ್ತವೆ ಎಂದು ಭಾವಿಸುತ್ತೇನೆ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನನ್ನ ಗೌರವಾನ್ವಿತ ಮಿತ್ರರಿಗೆ ನಾನೂ ಉತ್ತರಕೊಡಬಹುದಾದರೆ, ಈ ನಿರ್ಣಯದ ನಿಖರವಾದ ಉದ್ದೇಶ ಅದೇ ಆಗಿದೆ. ರಾಜ್ಯಗಳ ವಿವಿಧ ಪ್ರತಿನಿಧಿಗಳ ನಡುವೆ ಭಿನ್ನಾಭಿಪ್ರಾಯಗಳು ಇವೆ ಎಂದರೆ, ಮಾನ್ಯರೆ, ನಮಗೆ ತಿಳಿದಿರುವಂತೆ, ಈ ಸದನದಲ್ಲಿಯೂ ಕೂಡ ಭಾರತದ ವಿವಿಧ ವಿಭಾಗಗಳ ಜನರ ನಡುವೆ ಹಾಗೆಯೇ ಬ್ರಿಟಿಷ್ ಇಂಡಿಯಾದ ಜನರು ಮತ್ತು ರಾಜ್ಯಗಳ ನಡುವೆ ಭಿನ್ನಾಭಿಪ್ರಾಯಗಳು ಇವೆ. ಈ ನಿರ್ಣಯವು, ನಮಗೆ ವಿಶ್ವಾಸವಿರುವಂತಹ ಒಂದು ನಿಕಾಯವನ್ನು ರಚಿಸಲು ಉದ್ದೇಶಿಸುತ್ತದೆ. ಅದು ಒಂದು ಸಂಧಾನ ಸಮಿತಿಗೆ ರಾಜ್ಯಗಳಿಂದ ಚುನಾಯಿತರಾದ ಅಥವಾ ಆಯ್ಕೆಯಾದ ಪ್ರತಿನಿಧಿಗಳೊಡನೆ ವ್ಯವಹರಿಸುತ್ತದೆ. ಈ ಸದನವು ರಾಜರೊಡನೆ ಮತ್ತು ರಾಜ್ಯಗಳ ಜನರ ಪ್ರತಿನಿಧಿಗಳೊಡನೆ ಸಂಧಾನಗಳನ್ನು ಮಾಡಿಕೊಳ್ಳಲು ಪ್ರವೇಶಿಸಬೇಕೆಂದು ನಿರೀಕ್ಷಿಸಲಾಗುವುದಿಲ್ಲ ಎಂಬ ನಿಖರ ಕಾರಣದಿಂದಲೇ ಈ ಚಿಕ್ಕ ಸಮಿತಿಯನ್ನು ಪ್ರಸ್ತಾವಿಸಲಾಗಿದೆ. ಮಾನ್ಯ ಅಧ್ಯಕ್ಷರೆ, ನಾನು ಈ ನಿರ್ಣಯವನ್ನು ಅದು ಇರುವಂತೆಯೇ ಬೆಂಬಲಿಸುತ್ತೇನೆ ಮತ್ತು ಮಂಡಿಸಲಾದ ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಅವರು ಎತ್ತಿದ ಬಹುಪಾಲು ಪ್ರಶ್ನೆಗಳಿಗೆ ನನಗೆ ಮೊದಲು ಮಾತನಾಡಿದ ಉಪನ್ಯಾಸಕಾರರು ಉತ್ತರಿಸಿದ್ದಾರೆ, ಮತ್ತು ನಾನು ಅದನ್ನು ಪುನರಾವರ್ತನೆ ಮಾಡುವುದಿಲ್ಲ. ಒಂದು ನಿರ್ದಿಷ್ಟವಾದ ಅಂಶವನ್ನು ಕುರಿತು ನಾನು ಈ ಸದನದ ಗಮನವನ್ನು ಸೆಳೆಯಲು ಬಯಸುತ್ತೇನೆ. ಅದೆಂದರೆ ಯಾವ ಮಿತಿಯೊಳಗೆ ಈ ಸಮಿತಿಯು ಕೆಲಸ ಮಾಡಬೇಕೆಂದು ನಿರೀಕ್ಷಿಸಲಾಗಿದೆ ಎನ್ನುವುದು. ಹೀಗೆ ಮಾಡುತ್ತಾ, ಸಂಪುಟ ಯೋಜನೆಯ ೧೯(೨) ಕಂಡಿಕೆಯ ನಿಖರವಾದ ಪದಸರಣಿಯತ್ತ ಗೌರವಾನ್ವಿತ ಸದಸ್ಯರ ಗಮನವನ್ನು ಸೆಳೆಯಲು ಬಯಸುತ್ತೇನೆ. ಈ ಸಮಿತಿಯು ರಾಜ್ಯಗಳಿಂದ ಆಗಲೇ ಆಯ್ಕೆಮಾಡಲಾದ ಅಥವಾ ಆಯ್ಕೆ ಮಾಡಲಿರುವ ಸಂಧಾನ ಸಮಿತಿಯೊಡನೆ ಸಂಧಾನಕ್ಕೆ ತೊಡಗಬೇಕು ಎನ್ನುವುದನ್ನು ಗಮನಿಸಿ ನಿಮಗೆ ಸಂತೋಷವಾಗುತ್ತದೆ. ಪದಸರಣಿ ಹೀಗಿದೆ. "ಆಯ್ಕೆಯ ವಿಧಾನವನ್ನು ಸಮಾಲೋಚನೆಯ ಮೂಲಕ ತೀರ್ಮಾನಿಸಬೇಕಾಗುತ್ತದೆ." "ಆಯ್ಕೆ" ಎಂಬ ಶಬ್ದವನ್ನು ಅನೇಕ ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಬೇಕಾಗಿರುವುದು ಸಂಭವನೀಯ. ನಾವು ಅದಕ್ಕೆ ಏನು ಅರ್ಥ ಹಚ್ಚುತ್ತೇವೋ ಅದಕ್ಕಿಂತ ಭಿನ್ನವಾಗಿ ರಾಜ್ಯಗಳ ಪ್ರತಿನಿಧಿಗಳು ಪ್ರಾಯಃ ಅರ್ಥೈಸಬಹುದು, ಇತ್ಯಾದಿ. ಆದ್ದರಿಂದ ಈ ಸಮಿತಿಯ ಕೈಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಕಟ್ಟಿಹಾಕುವುದು ಅಥವಾ ಒಂದು ನಿರ್ದಿಷ್ಟವಾದ ಪ್ರಾತಿನಿಧ್ಯದ ವಿಧಾನವನ್ನು ಒತ್ತಾಯಿಸುವುದು ಸಾಧುವಲ್ಲ. ನಾವು ಅದನ್ನು ಸಂಧಾನಕಾರರಿಗೆ ಬಿಡಬೇಕು. ಹಾಗೆಯೇ ಮಾನ್ಯರೆ, ನಾನು ಅರಿಕೆಮಾಡಿಕೊಳ್ಳುವುದೇನೆಂದರೆ, ಸಮಿತಿಯು ಏನು ಮಾಡಬೇಕೆಂದು ನಿರ್ದೇಶಿಸುವ ಶ್ರೀ ಸೋಮನಾಥ ಲಹಿರಿಯವರ ತಿದ್ದುಪಡಿಯು ಕ್ರಮಬದ್ಧವಾಗಿಲ್ಲ. ಏಕೆಂದರೆ, ಅದು ವಾಸ್ತವವಾಗಿ ಈ ನಿರ್ಣಯವನ್ನು ಇಡಿಯಾಗಿ ತಳ್ಳಿಹಾಕುತ್ತದೆ. ಒಂದು ಸಮಿತಿಯು ಒಂದು ನಿರ್ದಿಷ್ಟವಾದ ರಿತಿಯಲ್ಲಿಯೇ ಪ್ರವರ್ತಿಸಬೇಕು ಎಂದು ನಾವು ಬಯಸಿದರೆ ಅದು ಒಂದು ಸಂಧಾನ ಸಮಿತಿಯಾಗಿಯೇ ಉಳಿಯುವುದಿಲ್ಲ. ಏಕೆಂದರೆ,

ಅದು ನಮ್ಮ ಪೂರ್ವ ನಿರ್ಧಾರಿತ ನಿರ್ದೇಶನವನ್ನೇ ವಾಸ್ತವವಾಗಿ ಕೈಗೊಳ್ಳಬೇಕಾಗುತ್ತದೆ. ನಾವು ಭಾರತದ ಅನೇಕ ವಿಭಾಗಗಳ ಜನರೊಡನೆ ವೈರ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ರಾಜ್ಯಗಳ ಜನರ ಪ್ರತಿನಿಧಿಗಳು ಮಾತ್ರ ನಮ್ಮೊಡನೆ ಮಾತನಾಡಲು ಹಕ್ಕುಳ್ಳವರಾಗಿದ್ದಾರೆ ಎಂಬ ಭಾವನೆ ಈ ಸದನದಲ್ಲಿ ಇದ್ದರೂ ನಾವು ಈ ವಿಷಯವನ್ನು ಜಾಗರೂಕತೆಯಿಂದ ಸಮೀಪಿಸಬೇಕು ಮತ್ತು ಈ ಸಮಿತಿಯು ಬಹಳ ಎಚ್ಚರಿಕೆಯಿಂದ ಕೆಲಸಮಾಡಬೇಕು. ಈ ಹಂತದಲ್ಲಿ ನಾವು ಈ ವಿವಾದಾಂಶವನ್ನು ಪೂರ್ವತೀರ್ಮಾನ ಮಾಡಬಾರದು ಅಥವಾ ಪೂರ್ವಾಗ್ರಹದಿಂದ ನೋಡಬಾರದು. ರಾಜ್ಯಗಳ ಜನರ ಮತ್ತು ಸಮಸ್ತ ಭಾರತದ ಜನರ ಹಿತಾಸಕ್ತಿಗಳಿಗೆ ಸೇವೆ ಸಲ್ಲಿಸಲು ಮತ್ತು ದೃಷ್ಟಿಯಲ್ಲಿರುವ ಗುರಿಯನ್ನು ಸಾಧಿಸಲು ಅತ್ಯುತ್ತಮ ವಿಧಾನ ಯಾವುದು ಎಂಬುದನ್ನು ತೀರ್ಮಾನಿಸಲು ಸಮಿತಿಗೇ ಬಿಡಬೇಕು. ಅವರ ತೀರ್ಮಾನಗಳನ್ನು ಕುರಿತು ನಾವು ಟೀಕೆ ಟಿಪ್ಪಣಿಗಳನ್ನು ಮಾಡಬೇಕೆಂದರೆ ಅದಕ್ಕೆ ಸಾಕಷ್ಟು ಅವಕಾಶಗಳಿವೆ ಎಂದು ಪಂಡಿತ್‌ಜಿ ನಮಗೆ ಭರವಸೆ ಕೊಟ್ಟಿದ್ದಾರೆ. ಈ ಸದನದ ಮುಂದೆ ನಾವು ನಮ್ಮ ಅಭಿಪ್ರಾಯವನ್ನು ಮಂಡಿಸಬಹುದು. ಆದ್ದರಿಂದ, ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಸದನವು ಈ ನಿರ್ಣಯವನ್ನು ಅಂಗೀಕರಿಸಬೇಕು ಮತ್ತು ಮಂಡಿಸಲಾದ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಶ್ರೀ ಮುನ್ಷಿ ಮಂಡಿಸಿದ ನಿರ್ಣಯವನ್ನು ಬೆಂಬಲಿಸಲು ನಾನು ಇಲ್ಲಿಗೆ ಬಂದಿದ್ದೇನೆ. ದಲಿತವರ್ಗದ ಒಬ್ಬ ಪ್ರತಿನಿಧಿಯನ್ನು ಸೇರಿಸಬೇಕು ಎಂಬ ತಿದ್ದುಪಡಿಯನ್ನು ಮಂಡಿಸಿದಾಗ ದೊಡ್ಡ ಕೋಲಾಹಲವೇ ಎದ್ದಿದ್ದನ್ನು ನಾನು ನೋಡಿದ್ದೇನೆ. ಕಾಲ ಕಾಲಕ್ಕೆ ಜಾತಿವಾರು ಪ್ರಾತಿನಿಧ್ಯಕ್ಕೆ ಒತ್ತಾಯ ಮಾಡಲಾಗುತ್ತಲೇ ಇದೆ. ಬೇರೆ ಭಾಗಗಳಿಗೆ ಹೋಲಿಸಿದರೆ ರಾಜ್ಯದಲ್ಲಿನ ದಲಿತವರ್ಗಗಳ ಪರಿಸ್ಥಿತಿಯು ತೀರ ಕೀಳಾಗಿದೆ ಎಂದು ಈ ಸದನಕ್ಕೆ ತಿಳಿಸಲು ಬಯಸುತ್ತೇನೆ. ಮೊನ್ನೆ ಕೊಚ್ಚಿಯ ನನ್ನ ಸೋದರಿ ಹರಿಜನರ ಸಾಮಾಜಿಕ ಪರಿಸ್ಥಿತಿಗಳನ್ನು ಕುರಿತು ಮಾತನಾಡುವಾಗ ರಾಜ್ಯಗಳಲ್ಲಿನ ಜನರ ದಿಗಿಲುಗೊಳಿಸುವಂತಹ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಕುರಿತು ಗಣನೆಗೆ ತೆಗೆದುಕೊಳ್ಳಲಿಲ್ಲ. ಕೊಚ್ಚಿ ರಾಜ್ಯದ ನಾಯಾಡಿಗಳ ಪ್ರಕರಣವನ್ನೇ ನಾನು ಉದಾಹರಿಸಬಹುದು. ಈ ಸಮುದಾಯವು ಅಸ್ಪೃಶ್ಯ ಮತ್ತು ಹತ್ತಿರಕ್ಕೆ ಹೋಗಲಾಗದಂತಹುದು ಅಷ್ಟೆ ಅಲ್ಲ ನೋಡಲಾಗದ್ದು ಕೂಡ. ಈ ಸಮುದಾಯವು ರಾಜಮಾರ್ಗದಲ್ಲಿ ಹಾದು ಹೋಗುವಂತಿಲ್ಲ. ಆದ್ದರಿಂದ ಆಯ್ಕೆಮಾಡಲಾಗಿರುವ ಸಮಿತಿಗೆ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ ರಾಜ್ಯದ ಪ್ರತಿನಿಧಿಗಳೊಡನೆ ಅವರು ಸಂಧಾನ ಮಾಡಿ ಅನುಸೂಚಿತ ಜಾತಿಗಳ ನಿಜವಾದ ಅಗತ್ಯಗಳನ್ನು ಪ್ರತಿನಿಧಿಸುವಂತಹ ಕೆಲವರಾದರೂ ದಲಿತವರ್ಗದ ಪ್ರತಿನಿಧಿಗಳನ್ನು ಅಥವಾ ಬೇರೆ ಯಾರನ್ನಾದರೂ ತೆಗೆದುಕೊಳ್ಳಬೇಕು.

**ಶ್ರೀ ದಯಾಲ್ ದಾಸ್ ಭಗತ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ನನಗೆ ಇಂಗ್ಲಿಷ್ ಬರುವುದಿಲ್ಲ ಎಂಬ ಸಂಗತಿಯ ಬಗೆಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ನನಗೆ ಹಿಂದಿ ಗೊತ್ತು ಮತ್ತು ಇಲ್ಲಿರುವ ನನ್ನ ಅನೇಕ ಗಣ್ಯ ಸ್ನೇಹಿತರಿಗೂ ಕೂಡ ಆ ಭಾಷೆ ಮಾತ್ರ ಗೊತ್ತು. ಈ ಸದನದಲ್ಲಿ ನಡೆಯುತ್ತಿರುವ ನಡವಳಿಗಳಿಂದ ಸ್ವಲ್ಪವೂ ಉಪಯುಕ್ತವಾದುದನ್ನು ನಾವು ಅರ್ಥಮಾಡಿಕೊಂಡಿಲ್ಲ. ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದಿಯನ್ನು ಬಲ್ಲ ಸ್ನೇಹಿತರು ಆ ಭಾಷೆಯಲ್ಲಿಯೇ ಮಾತನಾಡಬೇಕೆಂದು ದಯವಿಟ್ಟು ಕೋರಿಕೊಳ್ಳಿ. ಆಗ ನಮಗೆ ಸುಲಭವಾಗಿ ಅರ್ಥವಾಗುತ್ತದೆ.]*

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** : ಈ ನಿರ್ಣಯವು ಸ್ಥಾನಗಳ ಸಂಖ್ಯೆ ಮತ್ತು ಹಂಚಿಕೆಯನ್ನು ಕುರಿತು ತೀರ್ಮಾನಿಸಲು ಬಯಸುತ್ತದೆ. ನಾನು ಗೌರವಪೂರ್ವಕವಾಗಿ ನನ್ನ ಸ್ನೇಹಿತರಲ್ಲಿ ಪ್ರಾರ್ಥಿಸುವುದೇನೆಂದರೆ ಈ ಅಸ್ಪೃಶ್ಯ ಸಮುದಾಯದವರ ಹಿತಾಸಕ್ತಿಗಳನ್ನು ಯೋಗ್ಯರೀತಿಯಲ್ಲಿ ಸಂರಕ್ಷಿಸುವಂತೆ ದಯವಿಟ್ಟು ನೋಡಿಕೊಳ್ಳಿ.

**ದಿವಾನ್ ಚಮನ್‌ಲಾಲ್** (ಪಂಜಾಬ್ : ಸಾಮಾನ್ಯ) : ಗೌರವಾನ್ವಿತ ಮಂಡನೆಕಾರರಾದ ಶ್ರೀ ಕೆ.ಎಮ್. ಮುನ್ಷಿ ಎಲ್ಲ ವಿಷಯಗಳನ್ನೂ ಪರಿಪೂರ್ಣವಾಗಿ ಸ್ಪಷ್ಟಗೊಳಿಸಿದ್ದರೂ, ಇನ್ನೂ ಇರಬಹುದಾದ ಯಾವುದೇ ಅನುಮಾನಗಳನ್ನು ನಿವಾರಿಸಲು ನಾನು ಉಪ ಕಂಡಿಕೆ (ಬಿ)ಗೆ ಒಂದು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ. ಅದೇನೆಂದರೆ, 'ನಿರ್ಧರಿಸುವುದು' ಎಂಬ ಶಬ್ದದ ಬದಲು 'ನಿಗದಿಪಡಿಸುವುದು' ಎಂಬ ಶಬ್ದವನ್ನು ಹಾಕಿ ಮತ್ತು 'ಸಭೆ' ಎಂಬ ಶಬ್ದದ ಅನಂತರ ಮುಂದಿನದನ್ನು ಸೇರಿಸಿ – 'ಮತ್ತು ಅನಂತರ ಸಂವಿಧಾನ ರಚನಾಸಭೆಗೆ ಅಂತಹ ಸಂಧಾನದ ಫಲಿತಾಂಶವನ್ನು ವರದಿ ಮಾಡತಕ್ಕದ್ದು.'

ಸಂಧಾನ ಸಮಿತಿಯ ಪ್ರಯತ್ನಗಳ ಫಲಿತಾಂಶವನ್ನು ಈ ಸದನದ ಮುಂದೆ ತರಲಾಗುತ್ತದೆಯೋ ಅಥವಾ ಇಲ್ಲವೋ ಎಂದು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದರಿಂದಾಗಿ, ನಿಲುವನ್ನು ಸ್ಪಷ್ಟಪಡಿಸುವುದಕ್ಕಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ.

ಅನಂತರ ಮಾನ್ಯರೆ, ನಿರ್ಣಯದ ಉಪ ಕಂಡಿಕೆ (ಎ)ಯಲ್ಲಿರುವ 'ತೀರ್ಮಾನಿಸುವುದು' ಎಂಬ ಶಬ್ದವನ್ನೂ ಕೂಡ 'ನಿಗದಿಪಡಿಸುವುದು' ಎಂದು ಬದಲಾಯಿಸಬಹುದು.

ಈ ವಿಚಾರವಾಗಿ ನಾನು ಹೆಚ್ಚಿನದೇನನ್ನೂ ಹೇಳಬೇಕಾಗಿದ್ದಿಲ್ಲ. ಒಂದೇ ವಿನಾಯಿತಿ ಎಂದರೆ ಸಮಿತಿಯು ಯಾವುದೇ ಸಂಧಾನವನ್ನು ಮಾಡಿಕೊಂಡರೂ ಸಹಜವಾಗಿಯೇ ಈ ಸದನದ ಮುಂದೆ ತರಬೇಕು ಮತ್ತು ಈ ಸದನಕ್ಕೆ ಒಂದು ವರದಿಯನ್ನು ಸಲ್ಲಿಸಬೇಕು ಎಂಬುದನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನು ಒತ್ತಿಹೇಳಬೇಕಾಗಿದೆ. ಆಗ ಈ ಸದನವು ನೇಮಿಸಿದ ಸಂಧಾನ ಸಮಿತಿ ಮತ್ತು ರಾಜರ ಮಂಡಲಿಯು ನೇಮಿಸಿದ ಸಮಿತಿಯ ನಡುವೆ ಈ ಸದನದ ಅರಿವಿಲ್ಲದೆ ನಡೆದ ಎಲ್ಲ ಸಂಧಾನಗಳನ್ನೂ ಈ ಸದನವು ಪೂರ್ಣವಾಗಿ ವಶಪಡಿಸಿಕೊಳ್ಳಬಹುದು. ಸಂವಿಧಾನ ರಚನಾಸಭೆಯಲ್ಲಿ ನೆಲೆಸಿರುವ ಈ ಅಧಿಕಾರವನ್ನು ಈ ನಿರ್ಣಯದ ಪಠ್ಯದಲ್ಲಿ ನಿರ್ದಿಷ್ಟವಾಗಿ ಹೇಳಬೇಕಾದದ್ದು ಆವಶ್ಯಕ ಎಂದು ನಾನು ಭಾವಿಸುತ್ತೇನೆ.

**ಶ್ರೀ ಕೆ.ಎಮ್. ಮುನ್ಷಿ** : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ನಾನು ಮಂಡಿಸಿದಾಗ ಯಥೇಷ್ಟವಾಗಿ ಸ್ಪಷ್ಟಗೊಳಿಸಿರುವುದೇನೆಂದರೆ ಸಂಧಾನದ ಫಲಿತಾಂಶವು ಏನಾದರಾಗಲಿ ಅದನ್ನು ಈ ಸದನದ ಮುಂದೆ ಮಂಡಿಸಲಾಗುವುದು ಮತ್ತು ಈ ಸದನವು ಅಂಗೀಕರಿಸದೆ ಇರಬಹುದಾದ ಏನನ್ನೋ ಈ ಸಮಿತಿಯು ತೀರ್ಮಾನಿಸುತ್ತದೆ ಎಂದು ಭಯಪಡಲು ಕಾರಣವಿಲ್ಲ. ಈಗ ಗೌರವಾನ್ವಿತ ದಿವಾನ್ ಚಮನ್‌ಲಾಲ್ ಒಂದು ತಿದ್ದುಪಡಿಯನ್ನು ಮಂಡಿಸಿ ಈ ಸಮಿತಿಯ ವರದಿಯನ್ನು ಈ ಸದನದ ಮುಂದೆ ಇರಿಸಲಾಗುವುದು ಎನ್ನುವುದನ್ನು ತೀರ ಸ್ಪಷ್ಟಮಾಡಿದ್ದಾರೆ. ಈ ತಿದ್ದುಪಡಿಯನ್ನು ಅಂಗೀಕರಿಸಲು ನನಗೇನೂ ಹಿಂಜರಿಕೆಯಿಲ್ಲ.

ಇಲ್ಲಿ ಪ್ರಸ್ತಾವಿಸಲಾದ ಎರಡನೆಯ ಅಂಶವೆಂದರೆ ಅನುಸೂಚಿತ ವರ್ಗಗಳಿಗೆ ಸೇರಿದ ಒಬ್ಬ ಸದಸ್ಯರನ್ನು ಈ ಸಮಿತಿಗೆ ಸೇರಿಸಬೇಕು. ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಆ ಅಂಶಕ್ಕೆ ಆಗಲೇ ಉತ್ತರಕೊಟ್ಟಿದ್ದಾರೆ. ಇದು ಎಲ್ಲ ವಿಭಾಗಗಳು ಮತ್ತು ಅಲ್ಪಸಂಖ್ಯಾತರ ಒಂದು ಪ್ರಾತಿನಿಧಿಕ ಸಮಿತಿಯಲ್ಲ. ಇದು ಒಂದು ಚಿಕ್ಕ ಸಮಿತಿ. ಅದರ ಕಾರ್ಯಭಾರಗಳು ಬಹಳ ಪರಿಮಿತ. ಕೆಲವು ಆಧಾರಗಳ ಮೇಲಷ್ಟೆ ಸಂಧಾನಮಾಡಲು ಉದ್ದಿಷ್ಟವಾಗಿದೆ. ಮತ್ತು ಈ ಸಮಿತಿಯ ವರದಿಯನ್ನು ಈ ಸದನದ ಮುಂದೆ ಇರಿಸಲಾಗುವುದು.

ಅಲ್ಲಿ ಕೂತ (ಹಿಂದಿನ ಸಾಲಿನ ಪೀಠಗಳು) ಗೌರವಾನ್ವಿತ ಸದಸ್ಯರೊಬ್ಬರು ಇನ್ನೊಂದು ಅಂಶವನ್ನು ಮಂಡಿಸಿದ್ದಾರೆ. ಅವರು, "ರಾಜರ ಮಂಡಲಿಯು ರಚಿಸಿದ ಸಂಧಾನ ಸಮಿತಿ ಮತ್ತು ಭಾರತದ ರಾಜ್ಯಗಳ ಇತರ ಪ್ರತಿನಿಧಿಗಳೊಡನೆ ಸಮಾಲೋಚಿಸಿ..." ಎಂದು ಹೇಳಬೇಕಾದ ಅಗತ್ಯವೇನಿದೆ ಎಂದು ಕೇಳಿದ್ದಾರೆ. ಈ ನಿರ್ಣಯವನ್ನು ಈ ರೀತಿಯ ಪದಸರಣಿಯಲ್ಲಿ ಏಕೆ ರಚಿಸಲಾಗಿದೆ ಎನ್ನುವುದಕ್ಕೆ ಒಂದು ನ್ಯಾಯಸಮ್ಮತವಾದ ಕಾರಣವಿದೆ. ಸಂಪುಟ ನಿಯೋಗವು ಹೀಗೆ ಹೇಳಿದೆ:

"ಅಂತಿಮ ಸಂವಿಧಾನ ರಚನಾಸಭೆಯಲ್ಲಿ ರಾಜ್ಯಗಳಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡಬೇಕೆನ್ನುವುದು ಉದ್ದೇಶವಾಗಿದೆ. ಬ್ರಿಟಿಷ್ ಇಂಡಿಯಾದ ಅಂಗೀಕೃತ ಜನಸಂಖ್ಯೆಯ ಲೆಕ್ಕಾಚಾರವನ್ನು ಆಧರಿಸಿ ಅದು ೯೩ ಅನ್ನು ಮೀರಬಾರದು; ಆದರೆ ಆಯ್ಕೆಯ ವಿಧಾನವನ್ನು ಸಮಾಲೋಚನೆಯ ಮೂಲಕ ತೀರ್ಮಾನಿಸಬೇಕು. ಪ್ರಾರಂಭದ ಹಂತದಲ್ಲಿ ಈ ರಾಜ್ಯಗಳು ಒಂದು ಸಂಧಾನದ ಸಮಿತಿಯಿಂದ ಪ್ರತಿನಿಧಿಸಲ್ಪಡುತ್ತವೆ."

ಆದ್ದರಿಂದ ರಾಜ್ಯಗಳನ್ನು ಪ್ರತಿನಿಧಿಸುವ ಸಂಧಾನ ಸಮಿತಿಯ ಪ್ರಾತಿನಿಧ್ಯವನ್ನು ನಿರ್ಧರಿಸುವುದು ಅದರ ಒಂದು ಕಾರ್ಯಭಾರವಾಗಿದೆ. ರಾಜರ ಮಂಡಲಿಯು ಒಂದು ಸಂಧಾನ ಸಮಿತಿಯನ್ನು ನೇಮಿಸಿದೆ ಎಂದು ಈ ಸದನಕ್ಕೆ ತಿಳಿಸಲಾಗಿದೆ. ರಾಜರ ಮಂಡಲಿಯು ನೇಮಿಸಿರುವ ಈ ಸಮಿತಿಯು ಎಲ್ಲ ರಾಜ್ಯಗಳನ್ನೂ ಪ್ರತಿನಿಧಿಸುತ್ತದೆಯೇ ಮತ್ತು ಎಲ್ಲ ರಾಜ್ಯಗಳು ಈ ಸಂಧಾನ ಸಮಿತಿಯನ್ನು ತಮ್ಮ ಪ್ರತಿನಿಧಿಯೆಂದು ಭಾವಿಸಲು ಒಪ್ಪಿಕೊಂಡಿವೆಯೇ ಎಂದು ಈ ಸದನಕ್ಕಾಗಲಿ ಅಥವಾ ನನಗಾಗಲಿ ಯಾವ ಮಾಹಿತಿಯೂ ಇಲ್ಲ. ಆದ್ದರಿಂದ ಇಂತಹ ಊಹಾತೀತ ಪರಿಸ್ಥಿತಿಗಳಲ್ಲಿ ನಮ್ಮ ಸಂಧಾನ ಸಮಿತಿಯು ರಾಜರ ಮಂಡಲಿಯು ನೇಮಕಮಾಡಿದ ಸಂಧಾನ ಸಮಿತಿಯೊಡನಷ್ಟೇ ಅಲ್ಲದೆ ಬಿಡಿ ರಾಜ್ಯಗಳೊಡನೆಯೂ ಸಂಧಾನ ಮಾಡುವುದು ಅಗತ್ಯವಾಗಬಹುದು. ಈ ಕಾರಣದಿಂದಲೇ ನಮ್ಮ ನಿರ್ಣಯದಲ್ಲಿ ಶಬ್ದಗಳನ್ನು ಆ ರೀತಿಯಲ್ಲಿ ಬಳಸಲಾಗಿರುವುದು. ಆದ್ದರಿಂದ ಮಾನ್ಯರೆ, ಗೌರವಾನ್ವಿತ ಸದಸ್ಯರಾದ ದಿವಾನ್ ಚಮನ್‌ಲಾಲ್ ಮಂಡಿಸಿದ ತಿದ್ದುಪಡಿಯನ್ನು ಈ ಸದನವು ಅಂಗೀಕರಿಸಬಹುದು ಎಂದು ನಾನು ಕೋರುತ್ತೇನೆ.

**ಒಬ್ಬರು ಗೌರವಾನ್ವಿತ ಸದಸ್ಯರು :** ನಾನು ಈ ಪ್ರಶ್ನೆಯನ್ನು ಬೇರೊಂದು ದೃಷ್ಟಿಕೋನದಿಂದ ನೋಡುತ್ತೇನೆ. ರಾಜರ ಮಂಡಲಿಯು ಒಂದು ಸಂಧಾನ ಸಮಿತಿಯನ್ನು ನೇಮಿಸಿದೆ. ರಾಜ್ಯಗಳ ಇತರ ಪ್ರತಿನಿಧಿಗಳೂ ಇಲ್ಲಿ ಇದ್ದಾರೆಂದರೆ ಸಂಧಾನ ಸಮಿತಿಯ ಜೊತೆಯಲ್ಲಿ ಹೆಚ್ಚುವರಿಯಾಗಿ ಅವರೂ ಇರುತ್ತಾರೆಯೆ? ಮಂಡನೆಕಾರರಿಂದ ನಾನು ಒಂದು ಉತ್ತರವನ್ನು ನಿರೀಕ್ಷಿಸುತ್ತೇನೆ.

**ಶ್ರೀ ಕೆ.ಎಮ್. ಮುನ್ಷಿ :** ನಾನು ನಿಲುವನ್ನು ಸಾಕಷ್ಟು ಸ್ಪಷ್ಟಗೊಳಿಸಿದ್ದೇನೆ. ಎದುರುಗಡೆಯ ಸಂಧಾನ ಸಮಿತಿ ಅಥವಾ ರಾಜ್ಯಗಳು ಯಾರು ಯುಕ್ತವೆಂದು ಭಾವಿಸುತ್ತವೆಯೋ ಆ ಯಾವುದೇ ವ್ಯಕ್ತಿಯೊಡನೆ ವ್ಯವಹರಿಸಲು ನಮ್ಮ ಸಂಧಾನ ಸಮಿತಿಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡಲು ನಾವು ಬಯಸಿದ್ದೇವೆ. ಅವರು ಯಾವುದು ಯೋಗ್ಯವೆಂದು ಭಾವಿಸುತ್ತಾರೋ ಅಂತಹ ಯಾವುದೇ ನಿರ್ಧಾರಕ್ಕೆ ಬರುವ ಅವರ ಹಕ್ಕಿಗೆ ಅಡ್ಡಿಪಡಿಸಲು ನಾವು ಬಯಸುವುದಿಲ್ಲ. ಈ ವಿಚಾರದಲ್ಲಿ ಈ ನಿರ್ಣಯವು ಈಗಿರುವಂತೆ ಬಹಳ ಸ್ಪಷ್ಟವಾಗಿದೆ.

(ಶ್ರೀ ಪಿ.ಆರ್. ಠಾಕೂರ್ ಮಾತನಾಡಲು ಎದ್ದುನಿಂತರು.)

**ಮಾನ್ಯ ಅಧ್ಯಕ್ಷರು :** ಮಂಡನೆಕಾರರು ಈಗಾಗಲೇ ಉತ್ತರ ನೀಡಿದ್ದಾರೆ.

(ಶ್ರೀ ಪಿ.ಆರ್. ಠಾಕೂರ್ ವೇದಿಕೆಗೆ ಬಂದರು.)

**ಒಬ್ಬರು ಗೌರವಾನ್ವಿತ ಸದಸ್ಯರು :** ಮಾನ್ಯರೆ, ಮಂಡನೆಕಾರರು ಉತ್ತರವನ್ನು ಕೊಟ್ಟ ಮೇಲೆ ಯಾವುದೇ ಸದಸ್ಯರು ಭಾಷಣಮಾಡುವುದು ಉಚಿತವೆ?

**ಮಾನ್ಯ ಅಧ್ಯಕ್ಷರು :** ಶ್ರೀ ಠಾಕೂರ್ ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಪಿ.ಆರ್. ಠಾಕೂರ್ :** ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ನೀಡಿದ ಹೇಳಿಕೆಯ ದೃಷ್ಟಿಯಿಂದ, ನಾನು ಮಂಡಿಸಿದ್ದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಬಯಸುತ್ತೇನೆ. ಆದರೆ ನಾನು ಒಂದು ಸಂಗತಿಯನ್ನು ಮಾತ್ರ.... (ಧ್ವನಿಗಳು : 'ಬೇಡ, ಬೇಡ') ಹೇಳಲು ಬಯಸುತ್ತೇನೆ. (ಅನೇಕ ಸದಸ್ಯರು : 'ಬೇಡ, ಬೇಡ'). ನನಗೆ ಒಂದು ಭರವಸೆ ಬೇಕು : ೯೩ ಸ್ಥಾನಗಳಲ್ಲಿ ಕನಿಷ್ಠಪಕ್ಷ ಐದು ಸ್ಥಾನಗಳನ್ನಾದರೂ ದಲಿತವರ್ಗದವರಿಗೆ ಕೊಡಬೇಕು.

**ಶ್ರೀ ಸೋಮನಾಥ ಲಹಿರಿ** : ಮಾನ್ಯರೆ, ಈಗಾಗಲೇ ಅಂಗೀಕರಿಸಲಾಗಿರುವ ತಿದ್ದುಪಡಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

ದಿವಾನ್ ಚಮನ್‌ಲಾಲ್ ಅವರ ತಿದ್ದುಪಡಿಯನ್ನು ಪೂರ್ತಿಯಾಗಿ ಓದಬೇಕೆಂದು ನಾನು ಕೋರುತ್ತೇನೆ. ಅದರಿಂದ ನಾವು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ.

**ಮಾನ್ಯ ಅಧ್ಯಕ್ಷರು** : ತಿದ್ದುಪಡಿಯಾದ ನಿರ್ಣಯದ ಉಪಕಂಡಿಕೆ (ಬಿ) ಹೀಗಿರುತ್ತದೆ:

"ಈ ಸಭೆಗೆ ರಾಜ್ಯಗಳ ಪ್ರತಿನಿಧಿಗಳು ಆಯ್ಕೆಯಾಗಿ ಬರುವ ವಿಧಾನವನ್ನು ನಿಗದಿಪಡಿಸುವುದು ಮತ್ತು ಅನಂತರ ಸಂವಿಧಾನ ರಚನಾಸಭೆಗೆ ಸಂಧಾನದ ಫಲಿತಾಂಶವನ್ನು ವರದಿ ಮಾಡತಕ್ಕದ್ದು."

ಮಂಡನೆಕಾರರಾದ ಶ್ರೀ ಕೆ.ಎಮ್. ಮುನ್ಷಿ ಅಂಗೀಕರಿಸಿದ ತಿದ್ದುಪಡಿಯೊಡನೆ ಈ ನಿರ್ಣಯವು ಹೀಗೆ ಕಾಣುತ್ತದೆ :

"ರಾಜರ ಮಂಡಲಿಯು ರಚಿಸಿದ ಸಂಧಾನ ಸಮಿತಿ ಮತ್ತು ಭಾರತದ ರಾಜ್ಯಗಳ ಇತರ ಪ್ರತಿನಿಧಿಗಳೊಡನೆ ಸಮಾಲೋಚಿಸಲು ಕೆಳಗೆ ನಮೂದಿಸಿರುವ ಸದಸ್ಯರ ಒಂದು ಸಮಿತಿಯನ್ನು ರಚಿಸಲು ಈ ಸಭೆಯು ನಿರ್ಣಯಿಸುತ್ತದೆ :

(೧) ಮೌಲಾನಾ ಅಬುಲ್ ಕಲಾಮ್ ಆಜಾದ್

(೨) ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು

(೩) ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್

(೪) ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ

(೫) ಶ್ರೀ ಶಂಕರರಾವ್ ದೇವ್ ಮತ್ತು

(೬) ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

ಈ ಸಮಿತಿಯ ಉದ್ದೇಶವು ಹೀಗಿದೆ:

(ಎ) ೧೬ನೇ ಮೇ, ೧೯೪೬ರ ಸಂಪುಟ ಸಮಿತಿಯ ಹೇಳಿಕೆಯಲ್ಲಿ ಭಾರತದ ರಾಜ್ಯಗಳಿಗೆ ಮೀಸಲಾಗಿರಿಸಿದ ಸ್ಥಾನಗಳ ಸಂಖ್ಯೆಯು ವಿಧಾಯಕ ಸಭೆಯಲ್ಲಿ ೯೩ ಅನ್ನು ಮೀರದಂತೆ ಸ್ಥಾನಗಳ ವಿತರಣೆಯನ್ನು ನಿಗದಿಪಡಿಸುವುದು, ಮತ್ತು

(ಬಿ) ಈ ಸಭೆಗೆ ರಾಜ್ಯದ ಪ್ರತಿನಿಧಿಗಳು ಆಯ್ಕೆಯಾಗಿ ಬರುವ ವಿಧಾನವನ್ನು ನಿಗದಿಪಡಿಸುವುದು ಮತ್ತು ಅನಂತರ ಸಂವಿಧಾನ ರಚನಾಸಭೆಗೆ ಅಂತಹ ಸಂಧಾನದ ಫಲಿತಾಂಶವನ್ನು ವರದಿ ಮಾಡತಕ್ಕದ್ದು.

ಈ ಸಭೆಯು ಮುಂದುವರಿದು ನಿರ್ಣಯಿಸುವುದೇನೆಂದರೆ ಮುಂದೆ ಮೂರು ಜನರಿಗೆ ಹೆಚ್ಚಿಲ್ಲದಂತೆ ಇತರ ಸದಸ್ಯರನ್ನು ಸಮಿತಿಗೆ ಸೇರಿಸಬಹುದು ಮತ್ತು ಅಧ್ಯಕ್ಷರು ಸೂಚಿಸುವ ಕಾಲದಲ್ಲಿ ಮತ್ತು ರೀತಿಯಲ್ಲಿ ಈ ಸಭೆಯು ಅವರನ್ನು ಚುನಾಯಿಸಬಹುದು."

ಈಗ ಶ್ರೀ ಲಹಿರಿ ಅವರ ಇನ್ನೊಂದು ತಿದ್ದುಪಡಿ ಏನಾಯಿತು?

**ಶ್ರೀ ಸೋಮನಾಥ ಲಹಿರಿ** : ಸಂಧಾನಗಳ ವರದಿಯನ್ನು ಪರಿಗಣಿಸಲು ಸಮರ್ಥರಾಗುತ್ತೇವೆ ಎಂಬ ವಾಸ್ತವಾಂಶದ ದೃಷ್ಟಿಯಿಂದ ಮತ್ತು ಆ ಸಮಯದಲ್ಲಿ ರಾಜ್ಯದ ಜನರ ಹಕ್ಕು ಕೇಳಿಕೆಗಳನ್ನು ಅವು ಪೂರ್ಣವಾಗಿ ಈಡೇರಿಸಿಲ್ಲವಾದರೆ ಒತ್ತಾಯ ಮಾಡಬಹುದು ಎಂಬ ಕಾರಣದಿಂದ ನಾನು ನನ್ನ ಇನ್ನೊಂದು ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು** : ಆದ್ದರಿಂದ ಎಲ್ಲ ತಿದ್ದುಪಡಿಗಳೂ ಇತ್ಯರ್ಥಗೊಂಡಿವೆ.

ಈ ನಿರ್ಣಯವು, ತಿದ್ದುಪಡಿಯಾದಂತೆ ಅಂಗೀಕಾರವಾಯಿತು.

## ಗುರಿಗಳು ಮತ್ತು ಉದ್ದೇಶಗಳನ್ನು ಕುರಿತ ನಿರ್ಣಯದ ಪರಿಗಣನೆಯನ್ನು ಮುಂದೂಡುವುದನ್ನು ಕುರಿತಂತೆ ಅಧ್ಯಕ್ಷರ ಹೇಳಿಕೆ

**ಮಾನ್ಯ ಅಧ್ಯಕ್ಷರು :** ಮುಂದಿನ ಅಂಶವೆಂದರೆ ಕಾರ್ಯವಿಧಾನಗಳ ಸಮಿತಿಯ ವರದಿಯನ್ನು ಪರಿಗಣಿಸುವುದು. ಅದಕ್ಕೆ ಹೋಗುವುದಕ್ಕೆ ಮೊದಲು ನಾನು ಒಂದು ಹೇಳಿಕೆಯನ್ನು ನೀಡಲು ಬಯಸುತ್ತೇನೆ. ಈ ದಿನದ ಪ್ರಾರಂಭದಲ್ಲಿಯೇ ಅದನ್ನು ಮಾಡಬೇಕಾಗಿತ್ತೆಂದು ತೋರುತ್ತದೆ. ಆದರೆ ಕಣ್ತಪ್ಪಿನಿಂದ ಅದನ್ನು ನಾನು ಮಾಡಲಿಲ್ಲ. ಮೊನ್ನೆ ನಾವು ಸಭೆಯನ್ನು ಮುಕ್ತಾಯಗೊಳಿಸುವ ಮೊದಲು ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ್ದ ನಿರ್ಣಯವನ್ನು ಚರ್ಚಿಸುತ್ತಿದ್ದೆವು, ಮತ್ತು ಆ ನಿರ್ಣಯದ ಮೇಲಿನ ಚರ್ಚೆಯು ಇನ್ನೂ ಪೂರ್ಣವಾಗಿಲ್ಲ. ಉದ್ದೇಶಿತ ಭಾಷಣಕಾರರ ಹೆಸರಿನ ಪಟ್ಟಿಯು ಬಹಳ ದೀರ್ಘವಾಗಿದೆ. ನನ್ನ ಮುಂದೆ ಇನ್ನೂ ೫೦ ಹೆಸರುಗಳಿವೆ. ಈ ಸಭೆಯ ಇತರ ಪ್ರಮುಖ ಕಾರ್ಯವನ್ನು ತಡೆಹಿಡಿಯದೆ ಆ ಚರ್ಚೆಯನ್ನು ಇನ್ನೂ ಮುಂದಕ್ಕೆ ಕೊಂಡೊಯ್ಯುವುದು ಸಾಧ್ಯವಿಲ್ಲ ಎನ್ನುವುದು ಸುಸ್ಪಷ್ಟ. ಆದ್ದರಿಂದ ನಾನು ಆ ನಿರ್ಣಯದ ಮೇಲಿನ ಚರ್ಚೆಯನ್ನು ತಡೆಹಿಡಿದೆ. ಈಗ ನಾನು ಇತರ ಪ್ರಮುಖ ಅಂಶಗಳನ್ನು ನಡುವೆ ಸೇರಿಸಲು ಉದ್ದೇಶಿಸಿದ್ದೇನೆ. ಅನಂತರ ಇನ್ನೂ ಸಮಯ ಉಳಿದಿದ್ದರೆ ನಾವು ಆ ನಿರ್ಣಯದ ಮೇಲೆ ಮತ್ತಷ್ಟು ಚರ್ಚೆಯನ್ನು ಕೈಗೆತ್ತಿಕೊಳ್ಳಬಹುದು. ಕ್ರಿಸ್‌ಮಸ್‌ಗಾಗಿ ನಾವು ಸಭೆಯನ್ನು ಮುಂದೂಡುವ ಮೊದಲು ಆ ನಿರ್ಣಯವನ್ನು ಕುರಿತು ಚರ್ಚಿಸಲು ಸಮಯವು ಉಳಿದಿಲ್ಲದಿರಬಹುದು. ಆದ್ದರಿಂದ ಮತ್ತೆ ನಾವು ಸಭೆ ಸೇರಿದಾಗ ಮುಂದಿನ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಮಧ್ಯೆ, ಇಂದು ಹಾಜರಾಗಿಲ್ಲದವರು ಒಳಗೆ ಬರುವ ಅನುಕೂಲ ನಮಗೆ ದೊರೆಯಬಹುದು ಮತ್ತು ಆ ನಿರ್ಣಯವನ್ನು ಕುರಿತು ಅವರ ಅಭಿಪ್ರಾಯದ ಅನುಕೂಲವೂ ನಮಗೆ ದೊರೆಯಬಹುದು. ಆದ್ದರಿಂದ ಹೆಚ್ಚುವರಿ ಚರ್ಚೆಯನ್ನು ನಾವು ಮತ್ತೆ ಸೇರುವವರೆಗೂ ಮುಂದಕ್ಕೆ ಹಾಕಲಾಗಿದೆ.

## ಕಾರ್ಯವಿಧಾನಗಳ ನಿಯಮಗಳ ಸಮಿತಿಯ ವರದಿಯನ್ನು ಪರಿಗಣಿಸುವುದು

**ಮಾನ್ಯ ಅಧ್ಯಕ್ಷರು :** ನಿಯಮಗಳ ಸಮಿತಿಯ ವರದಿಯನ್ನು ಶ್ರೀ ಕೆ.ಎಮ್. ಮುನ್ಷಿ ಮಂಡಿಸುತ್ತಾರೆ.

**ಶ್ರೀ ಸೋಮನಾಥ ಲಹಿರಿ :** ಆ ನಿರ್ಣಯದ ಮೇಲಿನ ತಿದ್ದುಪಡಿಗಳನ್ನು ಅಂಗೀಕರಿಸಲು ಕಾಲದ ಗಡುವು ಏನು ಎಂದು ನಾನು ತಿಳಿದುಕೊಳ್ಳಲು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಈ ಸಂಜೆಯ ಹೊತ್ತಿಗೆ.

**ಶ್ರೀ ಸೋಮನಾಥ ಲಹಿರಿ :** ನಾಳೆ ಬೆಳಗ್ಗೆ ೧೧ ಗಂಟೆ

**ಮಾನ್ಯ ಅಧ್ಯಕ್ಷರು :** ಹೌದು, ನಾಳೆ ಬೆಳಗ್ಗೆ ೧೧ ಗಂಟೆ. ಆದರೆ ನಾವು ಚರ್ಚೆಯನ್ನು ನಿಲ್ಲಿಸದಿರೋಣ. ನಾವು ಮುಂದುವರಿಸೋಣ. ಏನಾದರೂ ತಿದ್ದುಪಡಿ ಇದ್ದರೆ ಅದನ್ನು ನಾವು ಪರಿಗಣಿಸಬಹುದು. ಆದರೆ ನಾನು ಚರ್ಚೆಯನ್ನು ತಡೆಹಿಡಿಯುವುದಿಲ್ಲ. ನಾವು ನಿರ್ಣಯವನ್ನು ಕುರಿತು ಚರ್ಚಿಸುತ್ತಾ ಇರೋಣ.

**ಶ್ರೀ ಕೆ.ಎಮ್. ಮುನ್ಷಿ :** ಮಾನ್ಯ ಅಧ್ಯಕ್ಷರೆ, ನಿಯಮಗಳ ಸಮಿತಿಯ ವರದಿಯನ್ನು ಈ ಸದನಕ್ಕೆ ಸಲ್ಲಿಸುವ ಗೌರವ ನನಗೆ ಪ್ರಾಪ್ತವಾಗಿದೆ. ಮುಂದೆ ಒಂದು ಪ್ರತಿಯನ್ನು ಈಗಾಗಲೇ ಈ ಸದನದ ಸದಸ್ಯರ ಮುಂದೆ ಇರಿಸಲಾಗಿದೆ. ನಾನು ಈ ಹಂತದಲ್ಲಿ ನಿಯಮಗಳ ಕೆಲವು ಪ್ರಮುಖವಾದ ವೈಶಿಷ್ಟ್ಯಗಳತ್ತ ಈ ಸದನದ ಗಮನವನ್ನು ಸೆಳೆಯಲಷ್ಟೇ ಉದ್ದೇಶಿಸಿದ್ದೇನೆ. ಹಾಗೆ ಮಾಡುವ ಮೊದಲು ನಿಯಮಗಳ ಸಮಿತಿಯ ಕಡೆಗೆ ಈ ಸದನದ ತೊಡಗುವಿಕೆಯನ್ನು ಆಹ್ವಾನಿಸುತ್ತೇನೆ. ನಿಯಮಗಳ ಸಮಿತಿಯು ತೀವ್ರ ಒತ್ತಡದ ಅಡಿಯಲ್ಲಿ ಕೆಲಸಮಾಡುತ್ತಾ ಇದೆ. ಮಾನ್ಯ ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತು. ನಾವು ಚೆದುರುವ ಮೊದಲು ಈ

ಸದನಕ್ಕಾಗಿ ನಿಯಮಗಳನ್ನು ಅಂಗೀಕರಿಸುವುದು ಅತ್ಯಂತ ಆವಶ್ಯಕವಾಗಿದೆ. ಸಂವಿಧಾನ ರಚನಾಸಭೆಯ ಸಂಘಟನೆಯನ್ನು ಸಂಪೂರ್ಣಗೊಳಿಸುವುದಕ್ಕಾಗಿ ಸಂಸ್ಥೆಯನ್ನು ಕಾರ್ಯಾರಂಭ ಮಾಡಬೇಕಾಗಿದೆ. ಸಮಿತಿಯ ಸದಸ್ಯರು ನಿಯಮಗಳ ಪ್ರತಿಯೊಂದು ಅಂಶದ ಕಡೆಗೂ ಜಾಗರೂಕತೆಯಿಂದ ಗಮನವನ್ನು ಮುಡಿಪಾಗಿಟ್ಟಿದ್ದಾರೆ ಎಂದು ನಾನು ಹೇಳಬಹುದಾಗಿದೆ. ನಮಗೆ ದಕ್ಷ ಮತ್ತು ಪ್ರಖ್ಯಾತ ನ್ಯಾಯಶಾಸ್ತ್ರಜ್ಞ ಸರ್ ಬಿ.ಎನ್. ರಾವ್ ಅವರ ನೆರವು ಲಭಿಸಿದೆ. ಸಮಿತಿಯು ಅದಕ್ಕೆ ಸಾಧ್ಯವಾದ ಪರಿಪೂರ್ಣ ರೂಪವನ್ನು ಕೊಡಲು ಯತ್ನಮೀರಿ ಶ್ರಮಿಸಿದೆ. ಆದರೂ ಅದರಲ್ಲಿ ಇನ್ನೂ ಕೆಲವು ಲೋಪದೋಷಗಳು ಉಳಿದಿರಬಹುದು. ಮತ್ತು ಸದನವು ಅದರಲ್ಲಿ ಕೆಲವು ಅಸಾಂಗತ್ಯಗಳನ್ನು ಕಂಡುಹಿಡಿಯಬಹುದು. ಕೆಲವು ದೃಷ್ಟಿಕೋನಗಳನ್ನು ಕೈಬಿಟ್ಟಿರಬಹುದು. ಆದ್ದರಿಂದ ಈ ಸದನವು ಅದರಲ್ಲಿ ತೊಡಗಿಕೊಳ್ಳಬೇಕೆಂದು ನಾನು ಕೋರುತ್ತೇನೆ. ಇವು ಈ ಸಭೆಯ ನಿಯಮಗಳು. ನಾವು ಮುಂದಿನ ಬಾರಿ ಸೇರುವಾಗ ಅವುಗಳನ್ನು ಬದಲಾಯಿಸಬಹುದು ಅಥವಾ ಸೇರ್ಪಡೆ ಮಾಡಬಹುದು. ನಾವು ಸದಾ ಅದಕ್ಕೆ ಹೊಸ ದೃಷ್ಟಿಕೋನಗಳನ್ನು ಸೇರಿಸಬಹುದು. ಕೆಲವನ್ನು ಕೈಬಿಡಬಹುದು. ಆದರೆ ಈ ನಿಯಮಗಳನ್ನು ಅಂಗೀಕರಿಸುವುದು ಮತ್ತು ಸಂವಿಧಾನ ರಚನಾಸಭೆಯ ವ್ಯವಸ್ಥೆಯು ಮುಂದುವರಿದುಕೊಂಡು ಹೋಗಲು ಒಂದು ಅಥವಾ ಎರಡು ಸಮಿತಿಗಳನ್ನು ನೇಮಿಸುವುದು ಅತ್ಯಂತ ಆವಶ್ಯಕವಾಗಿದೆ.

ಈ ಕೆಲವು ಟಿಪ್ಪಣಿಗಳೊಡನೆ, ನಿಯಮಗಳಲ್ಲಿರುವ ಕೆಲವು ಮುಖ್ಯವಾದ ಸಂಗತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಹೇಳುತ್ತೇನೆ. ಅದರಿಂದ ರಚಿಸಲು ಉದ್ದೇಶಿಲಾಗಿರುವ ಸಂಸ್ಥೆಯ ಸಂರಚನೆಯ ಬಗೆಗೆ ಈ ಸದನದ ಸದಸ್ಯರಿಗೆ ಸ್ಪಷ್ಟವಾಗಬಹುದಾಗಿದೆ.

ಮಾನ್ಯರೆ, ನಿಯಮ ೨, ಖಂಡ (ಡಿ) ಕಡೆಗೆ ಸದನದ ಗಮನವನ್ನು ನಾನು ಸೆಳೆಯುತ್ತೇನೆ. ನಮ್ಮ ಶಾಶ್ವತ ಅಧ್ಯಕ್ಷರ ಹೆಸರನ್ನು ಸಭಾಧ್ಯಕ್ಷರು ಎಂದು ನಾಮಾಂಕಿತಗೊಳಿಸಲು ನಾವು ಮಾರ್ಪಾಡನ್ನು ಮಾಡಿದ್ದೇವೆ. ಇದಕ್ಕೆ ಇಮ್ಮಡಿ ಕಾರಣಗಳಿವೆ. ಮೊದಲನೆಯದಾಗಿ ಅನೇಕ ಅಧ್ಯಕ್ಷರುಗಳು ಬರಲಿದ್ದಾರೆ – ವಿಭಾಗಗಳ ಅಧ್ಯಕ್ಷರುಗಳು, ಸಮಿತಿಗಳ ಅಧ್ಯಕ್ಷರುಗಳು, ಸಲಹಾಸಮಿತಿಗಳ ಅಧ್ಯಕ್ಷರುಗಳು, ಇತ್ಯಾದಿ. ಶಾಶ್ವತ ಅಧ್ಯಕ್ಷರಿಗೆ ಬೇರೆ ಅಧ್ಯಕ್ಷರಿಗಿಂತ ವಿಭಿನ್ನವಾಗಿ ಸುಲಭವಾಗಿ ಗುರುತಿಸಲು ಸಾಧ್ಯವಾಗವಂತಹ ಒಂದು ಹೆಸರು ಇರಬೇಕಾದುದು ಅಗತ್ಯ. ಎರಡನೆಯ ಕಾರಣವೆಂದರೆ ನಾವು ಒಂದು ಸ್ವತಂತ್ರ ನಿಕಾಯವಾಗಿ ಕಾರ್ಯನಿರ್ವಸುತ್ತಿದ್ದೇವೆ. ಈ ಕ್ಷಣದಲ್ಲಿ ಭಾರತ ಸರ್ಕಾರವು ಈ ಸಭೆಗೆ ಒಂದು ಸಂಸ್ಥೆಯನ್ನು ಎರವಲಾಗಿ ಕೊಟ್ಟಿದೆ, ಆದರೆ ಕೂಡಲೆ ನಿಯಮಗಳನ್ನು ಹೊರಡಿಸಲಾಗಿದೆ, ನಾವು ನಮ್ಮದೇ ಆದ ಒಂದು ಸಂಸ್ಥೆಯನ್ನು ಹೊಂದುತ್ತೇವೆ, ಮತ್ತು ಸಹಜವಾಗಿಯೇ ಸಭಾಧ್ಯಕ್ಷರು ಆ ಸಂಸ್ಥೆಯ ಅತ್ಯುನ್ನತ ಕಾರ್ಯನಿರ್ವಾಹಕ ಅಧಿಕಾರಿ ಆಗಿರುತ್ತಾರೆ. ಆದ್ದರಿಂದ ಒಂದು ಸಂಸ್ಥೆಯ ಮುಖ್ಯಸ್ಥರಾಗಿ ನಮ್ಮ ಅಧ್ಯಕ್ಷರಿಗೆ 'ಅಧ್ಯಕ್ಷ' ಎಂಬ ಹೆಸರನ್ನು ಅನ್ವಯಿಸುವುದು ಸೂಕ್ತವಾಗಿ ಕಾಣುವುದಿಲ್ಲ. ಈ ಸಂಬಂಧವಾಗಿ ನಾನು ನಿಯಮ ೨೭, ಉಪ ಕಂಡಿಕೆ (೮)ಅನ್ನು ಉಲ್ಲೇಖಿಸಬಹುದು.

> "ಸಭಾಧ್ಯಕ್ಷರು ವಿಧಾಯಕ ಸಭೆಯ ಹಕ್ಕುಗಳ ಪೋಷಕ, ಅದರ ವಕ್ತಾರ ಮತ್ತು ಅತ್ಯುನ್ನತ ಕಾರ್ಯನಿರ್ವಾಹಕ ಅಧಿಕಾರಿ ಆಗಿರತಕ್ಕದ್ದು."

ಈ ಕಾರಣದಿಂದಾಗಿಯೇ ನಿಯಮಗಳ ಸಮಿತಿಯ ಶಾಶ್ವತ ಅಧ್ಯಕ್ಷರು, 'ಸಭಾಧ್ಯಕ್ಷ'ರೆಂದು ನಾಮಾಂಕಿತರಾಗಬೇಕೆಂದು ಪ್ರಸ್ತಾವಿಸಿದೆ.

ಅಧ್ಯಾಯ ೨ ಸದಸ್ಯರ ಸೇರ್ಪಡೆ ಮತ್ತು ಸ್ಥಾನಗಳ ತೆರಪನ್ನು ಕುರಿತದ್ದಾಗಿದೆ. ಅದು ಹೆಚ್ಚು ಕಡಿಮೆ ಯಾಂತ್ರಿಕವಾದದ್ದು ಎಂದು ಹೇಳಬಹುದು.

ಅಧ್ಯಾಯ ೩ ಸಭೆಯ ಕಾರ್ಯಕಲಾಪವನ್ನು ಕುರಿತದ್ದಾಗಿದೆ. ಸಭೆ ಮತ್ತು ಅದರ ಅನೇಕ ಶಾಖೆಗಳ ಕಾರ್ಯಕಲಾಪಗಳನ್ನು ನಡೆಸಲು ಅನುಸರಿಸಬೇಕಾದ ವಿಧಾನವನ್ನು ಅದು ಕುರಿತದ್ದಾಗಿದೆ. ಇಲ್ಲಿರುವ

ಮುಖ್ಯವಾದ ಒಂದೇ ಒಂದು ಉಪಬಂಧವೆಂದರೆ ೫ನೇ ಪುಟದಲ್ಲಿರುವ ನಿಯಮ ೭.

"ಈ ವಿಧಾಯಕ ಸಭೆಯ ಒಟ್ಟು ಸದಸ್ಯರಲ್ಲಿ ಕನಿಷ್ಠ ಮೂರನೆಯ ಎರಡು ಭಾಗದಷ್ಟು ಸದಸ್ಯರು ಒಂದು ನಿರ್ಣಯದ ಮೂಲಕ ಸಮ್ಮತಿಯನ್ನು ನೀಡದಿದ್ದರೆ, ಈ ವಿಧಾಯಕ ಸಭೆಯನ್ನು ವಿಸರ್ಜಿಸತಕ್ಕುದಲ್ಲ."

ತಮ್ಮ ಉದ್ಘಾಟನಾ ಭಾಷಣದಲ್ಲಿ ಅಧ್ಯಕ್ಷರು ಸಂತೋಷದಿಂದ ಹೇಳಿದಂತೆ ನಾವು ಒಂದು ಸಾರ್ವಭೌಮ ಸಂಸ್ಥೆಯಾಗಿದ್ದೇವೆ. ಹೀಗಿರುತ್ತ ವಿಧಾಯಕ ಸಭೆಯನ್ನು ವಿಸರ್ಜನೆ ಮಾಡಬೇಕಾದರಾಗಲಿ ಅಥವಾ ಅಲ್ಲವಾಗಲಿ ಅದು ಸಂಪೂರ್ಣವಾಗಿ ನಮ್ಮ ಮೇಲೆಯೇ ಅವಲಂಬಿಸಿರಬೇಕು. ಈ ನಿಯಮದಲ್ಲಿ ಇದನ್ನು ಸ್ಪಷ್ಟಗೊಳಿಸಲಾಗಿದೆ.

ನಿಮ್ಮ ಗಮನವನ್ನು ಸೆಳೆಯಲು ನಾನು ಬಯಸಿರುವ ಮುಂದಿನ ಮುಖ್ಯವಾದ ನಿಯಮವೆಂದರೆ – ನಿಯಮ ೧೫. ಈ ನಿಯಮ ೧೫ ವಿಧಾಯಕ ಸಭೆಗಷ್ಟೇ ಅಲ್ಲದೆ ಅದರ ಶಾಖೆಗಳಿಗೂ ಸದಸ್ಯರ ನಿರ್ದಿಷ್ಟ ಅಗತ್ಯ ಸಂಖ್ಯೆಯನ್ನು (ಕೋರಂ) ನಿಗದಿಪಡಿಸುತ್ತದೆ. ಪ್ರಾಂತೀಯ ಸಂವಿಧಾನವನ್ನು ಇತ್ಯರ್ಥಗೊಳಿಸಿದಾಗ, ಆ ಪ್ರಾಂತ್ಯದ ಪ್ರತಿನಿಧಿಗಳ ಕನಿಷ್ಠ ಐದನೆಯ ಎರಡು ಭಾಗ ಕೋರಂ ಇರುವುದು ಅಗತ್ಯವಾಗಿದೆ.

ಸದನದ ಗಮನವನ್ನು ಸೆಳೆಯಲು ನಾನು ಬಯಸಿರುವ ಮುಂದಿನ ಮುಖ್ಯವಾದ ನಿಯಮವೆಂದರೆ – ನಿಯಮ ೧೮. ಅದು ಹೀಗೆ ವಿಧಿಸುತ್ತದೆ :

"ಈ ವಿಧಾಯಕ ಸಭೆಯಲ್ಲಿ ಕಾರ್ಯಕಲಾಪಗಳು ಹಿಂದೂಸ್ತಾನಿ (ಹಿಂದಿ ಅಥವಾ ಉರ್ದು) ಅಥವಾ ಇಂಗ್ಲಿಷ್‌ನಲ್ಲಿ ನಡೆಯತಕ್ಕದ್ದು. ಈ ಎರಡೂ ಭಾಷೆಗಳ ಪರಿಚಯವಿಲ್ಲದ ಯಾವುದೇ ಸದಸ್ಯನು ಅಧ್ಯಕ್ಷರ ಅನುಮತಿಯ ಮೇರೆಗೆ ತನ್ನ ಮಾತೃಭಾಷೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಬಹುದು.

ಕೆಲವೇ ನಿಮಿಷಗಳ ಹಿಂದೆ, ಇಂಗ್ಲಿಷ್ ಗೊತ್ತಿಲ್ಲದ ಒಬ್ಬರು ಸದಸ್ಯರು ಏನು ನಡೆಯುತ್ತಿದೆ ಎಂದು ತಮಗೆ ಅರ್ಥವಾಗುತ್ತಿಲ್ಲ ಎಂದು ದೂರಿದರು. ಅಂತಹ ತೊಂದರೆಯನ್ನು ನಿವಾರಿಸುವುದು ಈ ನಿಯಮದ ಉದ್ದೇಶವಾಗಿದೆ. ನಿಯಮದ ಉಪ ಖಂಡ ೨ ಹೀಗೆ ಹೇಳುತ್ತದೆ :

"ವಿಧಾಯಕ ಸಭೆಯ ಈ ಅಧಿಕೃತ ದಾಖಲೆಯನ್ನು ಹಿಂದೂಸ್ತಾನಿ (ಹಿಂದಿ ಮತ್ತು ಉರ್ದು ಎರಡೂ) ಮತ್ತು ಇಂಗ್ಲಿಷ್‌ನಲ್ಲಿ ಇರಿಸಬೇಕು."

"ಇದರ ಫಲಿತಾಂಶವೇನೆಂದರೆ ನಮ್ಮ ಅಧಿಕೃತ ದಾಖಲೆಯನ್ನು ಮೂರು ಭಾಷೆಗಳಲ್ಲಿ, ಹಿಂದಿ, ಉರ್ದು ಮತ್ತು ಇಂಗ್ಲಿಷ್ ಇರಿಸಲಾಗುವುದು."

ಮುಂದಿನ ಪ್ರಮುಖ ಅಂಶವನ್ನು ೯ನೇ ಪುಟದ ನಿಯಮ ೨೩ ಮತ್ತು ೨೩ಎ ಯಲ್ಲೀ ವಿವೇಚಿಸಲಾಗಿದೆ. ಇದು ಸಂಪುಟ ನಿಯೋಗದ ಹೇಳಿಕೆಯಲ್ಲಿ ವಿಧಿಸಲಾದ ವಿಧಾನವನ್ನು ಅನುಸರಿಸುತ್ತದೆ.

"ಕಾರ್ಯಕಲಾಪಗಳ ವಿಧಾನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿ ಅಧ್ಯಕ್ಷರ ತೀರ್ಮಾನವೇ ಅಂತಿಮವಾಗಿರತಕ್ಕದ್ದು :

ನಿಬಂಧನೆಯೆಂದರೆ ಒಂದು ಪ್ರಸ್ತಾವವು ಪ್ರಮುಖ ಕೋಮುವಾರು ಸಮಸ್ಯೆಯೆಂದು ಹೇಳಲಾದ ಒಂದು ವಿವಾದಾಂಶವನ್ನು ಎತ್ತಿದರೆ ಯಾವುದಾದರೊಂದು ಪ್ರಧಾನ ಸಮುದಾಯದ ಬಹುಸಂಖ್ಯೆಯ ಪ್ರತಿನಿಧಿಗಳು ಪ್ರಾರ್ಥಿಸಿಕೊಂಡರೆ, ಅಧ್ಯಕ್ಷರು ತಮ್ಮ ನಿರ್ಣಯವನ್ನು ಕೊಡುವ ಮುನ್ನ ಫೆಡರಲ್ ನ್ಯಾಯಾಲಯದೊಡನೆ ಸಮಾಲೋಚಿಸತಕ್ಕದ್ದು."

ಅದು ಹೇಳಿಕೆಯ ಒಂದು ಭಾಗವಾಗಿದೆ.

"ಮುಂದುವರಿದು ನಿಬಂಧಿಸಿರುವುದೇನೆಂದರೆ, ಹೇಳಿಕೆಯ ೨೦ನೇ ಕಂಡಿಕೆಯಲ್ಲಿ ಉಲ್ಲೇಖಿಸಲಾದ ಸಲಹಾ ಸಮಿತಿಯ ವರದಿಯನ್ನು ಆಧರಿಸಿ ಯಾವ ವಿಭಾಗವೂ ಕೇಂದ್ರ ಶಾಸನಸಭೆಯ ಕಾರ್ಯಭಾರಗಳನ್ನು ಉಲ್ಲಂಘಿಸಬಾರದು ಅಥವಾ ಕೇಂದ್ರ ಶಾಸನಸಭೆಯ ಯಾವುದೇ ತೀರ್ಮಾನವನ್ನು ಬದಲಾಯಿಸಬಾರದು."

ಸಲಹಾ ಸಮಿತಿಯ ಕಾರ್ಯಭಾರಗಳನ್ನು ನಿಯಮ ೨೩ಎ ಯಲ್ಲಿ ವಿವರವಾಗಿ ನಮೂದಿಸಲಾಗಿದೆ.

"ಪ್ರಸ್ತಾವನೆಗಳನ್ನು ಉಪಕ್ರಮಿಸುವುದು ಮತ್ತು ಪರಿಗಣಿಸುವುದು ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರನ್ನು ರಕ್ಷಿಸುವುದಕ್ಕೆ ಷರತ್ತುಗಳು ಮತ್ತು ಗುಡ್ಡಗಾಡು ಹಾಗೂ ಹೊರಚ್ಚಾಗಿರುವ ಪ್ರದೇಶಗಳ ಆಡಳಿತಕ್ಕಾಗಿ ಒಂದು ವರದಿಯನ್ನು ತಯಾರಿಸಿ ಶಾಸನಸಭೆಗೆ ಸಲ್ಲಿಸುವುದು, ಹೇಳಿಕೆಯ ಕಂಡಿಕೆ ೧೯ ಮತ್ತು ೨೦ರಲ್ಲಿ ಉಲ್ಲೇಖಿಸಿರುವ ಸಲಹಾ ಸಮಿತಿಯ ಏಕಮಾತ್ರ ಕಾರ್ಯಭಾರವಾಗಿರಬೇಕು; ಇಂತಹ ವರದಿಯ ಮೇಲೆ ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ಸಂವಿಧಾನದ ಸೂಕ್ತ ಸ್ಥಳಗಳಲ್ಲಿ ಈ ಹಕ್ಕುಗಳನ್ನು ಅಳವಡಿಸುವ ಪ್ರಶ್ನೆಯನ್ನು ಕುರಿತು ತೀರ್ಮಾನಿಸುವುದು ಶಾಸನಸಭೆಯ ವ್ಯಾವರ್ತಕ ಕಾರ್ಯಭಾರವಾಗಿರಬೇಕು."

ಸಮಗ್ರ ಭಾರತದ ನಿರ್ದಿಷ್ಟ ವಿಷಯಗಳು, ಅಲ್ಲದೆ ಪ್ರಾಂತೀಯ ಸಂಕಷ್ಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯವಹರಿಸುವುದು ಸಲಹಾ ಸಮಿತಿಯ ಕಾರ್ಯಭಾರವಾಗಿದೆ. ಆದುದರಿಂದ ೨೦ನೇ ನಿಯಮದ ಪ್ರಕಾರ ಕೇಂದ್ರ ಶಾಸನ ಸಭೆಯು ಸೇರಿದಾಗ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

ಅಧ್ಯಾಯ ೪ ಸಭಾಧ್ಯಕ್ಷರನ್ನು ಕುರಿತು ವಿವೇಚಿಸುತ್ತದೆ ಮತ್ತು ಯಾವಾಗ ಅವರ ಸ್ಥಾನವು ಖಾಲಿಯಾದರೆ ಅದನ್ನು ಭರ್ತಿಮಾಡುವ ವಿಧಾನವನ್ನು ವಿವರಿಸುತ್ತದೆ. ಈ ಸದನವು ಗಮನಿಸುವಂತೆ ಇವು ಹೆಚ್ಚು ಕಡಿಮೆ ಔಪಚಾರಿಕವಾದ ಸಂಗತಿಗಳು.

ಅಧ್ಯಾಯ ೫ ಉಪಸಭಾಧ್ಯಕ್ಷರನ್ನು ಕುರಿತು ವಿವೇಚಿಸುತ್ತದೆ. ಐದು ಜನ ಉಪಸಭಾಧ್ಯಕ್ಷರು ಇರಬೇಕೆಂದು ಪ್ರಸ್ತಾವಿಸಲಾಗಿದೆ. ಇಬ್ಬರನ್ನು ಸದನವು ಚುನಾಯಿಸಬೇಕು. ಒಂದು ವಿಭಾಗವು ತನ್ನ ಅಧ್ಯಕ್ಷರನ್ನು ಚುನಾಯಿಸಿದಾಗ, ಪ್ರತಿ ವಿಭಾಗದ ಸಭಾಧ್ಯಕ್ಷರು ಶಾಸನ ಸಭೆಯ ಪದನಿಮಿತ್ತ ಉಪ ಸಭಾಧ್ಯಕ್ಷರಾಗುತ್ತಾರೆ. ಇದರ ಫಲವಾಗಿ ಸಭಾಧ್ಯಕ್ಷರು ಮತ್ತು ಐದು ಜನ ಉಪಸಭಾಧ್ಯಕ್ಷರು ಒಂದಾಗಿ ಸೇರಿ ಶಾಸನ ಸಭೆ ಮತ್ತು ಅದರ ಶಾಖೆಗಳ ಎಲ್ಲ ಚಟುವಟಿಕೆಗಳನ್ನೂ ಸಹಯೋಜಿಸುತ್ತಾರೆ.

ಅಧ್ಯಾಯ ೬ ಸಂವಿಧಾನ ರಚನಾಸಭೆಯ ಕಚೇರಿಯನ್ನು ಕುರಿತು ವಿವೇಚಿಸುತ್ತದೆ. ಅದನ್ನು ಸಲಹಾ ಶಾಖೆ ಮತ್ತು ಆಡಳಿತ ಶಾಖೆ ಎಂದು ಎರಡು ಶಾಖೆಗಳಾಗಿ ವಿಭಾಗಿಸಲಾಗಿದೆ. ಸಾಂವಿಧಾನಿಕ ಸಲಹೆಗಾರರು ಸಲಹಾ ಶಾಖೆಯ ಮುಖ್ಯಸ್ಥರಾಗಿರುತ್ತಾರೆ ಮತ್ತು ಪೂರ್ಣಕಾಲಿಕ ಕಾರ್ಯದರ್ಶಿಯವರು ಆಡಳಿತ ಶಾಖೆಯ ಮುಖ್ಯಸ್ಥರಾಗಿರುತ್ತಾರೆ.

ಅಧ್ಯಾಯ ೭ ಸಮಿತಿಗಳನ್ನು ಕುರಿತು ವಿವೇಚಿಸುತ್ತದೆ. ಮೊದಲನೆಯ ಮತ್ತು ಪ್ರಾಯಃ ಅತ್ಯಂತ ಮುಖ್ಯವಾದ ಸಮಿತಿ ಎಂದರೆ ಸಂಚಾಲಕ ಸಮಿತಿ. ಗೌರವಾನ್ವಿತ ಸದಸ್ಯರು ನಿಯಮ ೩೯ ಅನ್ನು ನೋಡಿದರೆ ಅದರಲ್ಲಿ ಸಂಚಾಲಕ ಸಮಿತಿಯು ಕಾರ್ಯಭಾರಗಳನ್ನು ವಿಶದೀಕರಿಸಿರುವುದನ್ನು ಕಾಣಬಹುದು. ಅಲ್ಲಿ ನಿಯೋಜಿಸಿರುವಂತೆ ಸಂಚಾಲಕ ಸಮಿತಿಯ ಕಾರ್ಯಕಲಾಪವೆಂದರೆ ಅನುರೂಪವಾದ ಪ್ರಸ್ತಾವಗಳು ಮತ್ತು ತಿದ್ದುಪಡಿಗಳನ್ನು ಒಟ್ಟುಗೂಡಿಸುವುದು, ಮತ್ತು ಸಾಧ್ಯವಾದರೆ ಸಂಯುಕ್ತ ಪ್ರಸ್ತಾವಗಳು ಮತ್ತು ತಿದ್ದುಪಡಿಗಳಿಗೆ ಸಂಬಂಧಪಟ್ಟ ಪಕ್ಷಗಳ ಒಪ್ಪಿಗೆಯನ್ನು ಪಡೆದುಕೊಳ್ಳುವುದು; ಶಾಸನಸಭೆ ಮತ್ತು ಅದರ ಕಚೇರಿಗಳ ನಡುವೆ, ವಿಭಾಗಗಳ ನಡುವೆ ಅವುಗಳ ಒಳಗೇ, ಸಮಿತಿಯ ಒಳಗೇ ಮತ್ತು ಸಭಾಧ್ಯಕ್ಷರು ಹಾಗೂ ಶಾಸನ ಸಭೆಯ ಯಾವುದೇ ಭಾಗದ ನಡುವೆ ಒಂದು ಸಂಪರ್ಕ ಸಂಸ್ಥೆಯಾಗಿ ವರ್ತಿಸುವುದು. ಹೀಗೆ ಅದು ಕೇಂದ್ರ ಆಡಳಿತ ಸಂಸ್ಥೆಯಾಗುತ್ತದೆ. ಅದು ಶಾಸನ ಸಭೆ ಮತ್ತು ಅದರ ಎಲ್ಲ ಶಾಖೆಗಳ ವಿವಿಧ ಚಟುವಟಿಕೆಗಳನ್ನು ಸಹ ಯೋಜಿಸುತ್ತದೆ.

ಅನಂತರ ಸಿಬ್ಬಂದಿ ಮತ್ತು ಆರ್ಥಿಕ ಸಮಿತಿಗಳ ರಚನೆಯು ಬರುತ್ತದೆ. ಪರಿಚಯಪತ್ರಗಳ ಸಮಿತಿಯನ್ನು ಕೂಡ ನೇಮಿಸಬೇಕಾಗುತ್ತದೆ. ಅದರ ಉದ್ದೇಶವು ಚುನಾಯಿತ ಅಥವಾ ಇತರ ಸದಸ್ಯರ ಬಿರುದುಗಳ

ಸಿಂಧುತ್ವವನ್ನು ಕುರಿತ ಪ್ರಶ್ನೆಗಳನ್ನು ನಿರ್ಧರಿಸುವುದು. ಇತರ ಸಮಿತಿಗಳಿಗೂ ಅವಕಾಶವನ್ನು ಮಾಡಿಕೊಡಲಾಗಿದೆ.

ಅಧ್ಯಾಯ ೮ ಮುಂಗಡ ಪತ್ರವನ್ನು ಕುರಿತು ವಿವೇಚಿಸುತ್ತದೆ.

ಅಧ್ಯಾಯ ೯ ವೇತನಗಳು ಮತ್ತು ಭತ್ಯೆಗಳನ್ನು ಕುರಿತು ವಿವೇಚಿಸುತ್ತದೆ. ಅದನ್ನು ಸಿಬ್ಬಂದಿ ಮತ್ತು ಆರ್ಥಿಕ ಸಮಿತಿಯು ಅನುಮೋದಿಸಬೇಕು.

ಅಧ್ಯಾಯ ೧೦ ಚುನಾವಣೆಗಳಿಗೆ ಸಂಬಂಧಿಸಿದ ಅನುಮಾನಗಳು ಮತ್ತು ವಿವಾದಗಳನ್ನು ಕುರಿತು ವಿವೇಚಿಸುತ್ತದೆ. ಈ ಉಪಬಂಧಗಳು ಹೆಚ್ಚು ಕಡಿಮೆ ಯಾಂತ್ರಿಕವಾಗಿದ್ದು ಭಾರತದ ವಿವಾದಾತ್ಮಕ ಚುನಾವಣೆಗಳಿಗೆ ಸಂಬಂಧಿಸಿದ ಶಾಸನಗಳ ಸಾಮಾನ್ಯ ವಿಧಾನಗಳನ್ನು ಅನುಸರಿಸುತ್ತವೆ. ಕೈಬಿಡಲಾಗಿರುವ ಒಂದೇ ಒಂದು ಮುಖ್ಯವಾದ ಅಂಶವನ್ನು ನಿಯಮ ೫೫ ವಿವೇಚಿಸುತ್ತದೆ. ನಿಯಮ ೫೫ ಹೀಗೆ ಹೇಳುತ್ತದೆ :

> "ಅಂತಹ ಶಿಫಾರಸನ್ನು ಮಾಡಿದಾಗ, ಅಹವಾಲನ್ನು ಕುರಿತು ವಿಚಾರಣೆಯನ್ನು ನಡೆಸಲು ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳಿಂದ ಕೂಡಿದ ಒಂದು ಚುನಾವಣಾ ನ್ಯಾಯಾಧಿಕರಣವನ್ನು ಸಭಾಧ್ಯಕ್ಷರು ನೇಮಿಸತಕ್ಕದ್ದು."

ಈಗ, ಈ ನ್ಯಾಯಾಧಿಕರಣವು ವಿವೇಚಿಸಬೇಕಾದ ವಿಚಾರಗಳನ್ನು ಕುರಿತು ಹೇಳುವುದಾದರೆ ಅವು ನಿಯಮಗಳ ಒಂದು ಭಾಗ ಆಗಲಾರವು. ಅದು ಏನು ಮಾಡುತ್ತದೆ ಎಂದರೆ ಈ ಸದನದ ಒಬ್ಬ ಸದಸ್ಯನ ಸ್ಥಾನಮಾನವನ್ನು ಕುರಿತು ನ್ಯಾಯನಿರ್ಣಯ ನೀಡುತ್ತದೆ. ಅದನ್ನು ಒಂದು ಸುಗ್ರೀವಾಜ್ಞೆಯ ಮೂಲಕ ಮಾತ್ರ ಮಾಡಬಹುದಾಗಿದೆ ಎಂದು ಭಾವಿಸಲಾಗಿದೆ. ಆಗ ಅದು ಕಾನೂನಿನ ಒಂದು ಭಾಗವಾಗುತ್ತದೆ. ಇಲ್ಲದಿದ್ದರೆ ಗಂಭೀರವಾದ ತೊಂದರೆಗಳು ಉದ್ಭವಿಸುವ ಸಂಭವವಿದೆ. ಆದ್ದರಿಂದ ಅಗತ್ಯವಾದ ಸುಗ್ರೀವಾಜ್ಞೆಯನ್ನು ಹೊರಡಿಸುವ ಉದ್ದೇಶದಿಂದ ಸೂಕ್ತವಾದ ಪ್ರಾಧಿಕಾರವನ್ನು ಪ್ರೇರಿಸುವುದು ಸಭಾಧ್ಯಕ್ಷರಿಗೆ ಬಿಟ್ಟ ವಿಚಾರ.

ಅಧ್ಯಾಯ ೧೧ ಸಮಸ್ತ ದೇಶದ ಮತ್ತು ಪ್ರಾಂತೀಯ ಸಂವಿಧಾನದ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಕೆಲವು ಉಪಬಂಧಗಳನ್ನು ವಿವೇಚಿಸುತ್ತದೆ. ಈ ಸದನವು ಗಮನಿಸುವಂತೆ ನಿಯಮ ೫೮(೧) ಅನೇಕ ಪ್ರಾಂತ್ಯಗಳು ಮತ್ತು ರಾಜ್ಯಗಳಿಗೆ ಅವಕಾಶವನ್ನು ನೀಡುವ ಉಪಬಂಧಗಳನ್ನು ಕುರಿತು ವಿವೇಚಿಸುತ್ತದೆ. ಅವುಗಳ ಶಾಸನ ಸಭೆಗಳ ಮೂಲಕ ವಿಧಾಯಕ ಸಭೆಯ ನಿರ್ಣಯಗಳ ಮೇಲೆ ತಮ್ಮದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಂವಿಧಾನದ ಪ್ರಮುಖ ಲಕ್ಷಣಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಅಥವಾ ವಿಧಾಯಕ ಸಭೆಯು ಹಾಗೆ ನಿರ್ಧರಿಸಿದರೆ ಸಂವಿಧಾನದ ಪೂರ್ವಭಾವಿ ಕರಡಿನ ಮೇಲೆ ನಿರ್ಧಾರ ಕೈಗೊಳ್ಳುತ್ತದೆ.

ಅನಂತರ ಖಂಡ ೨ ಸಂಬಂಧಪಟ್ಟ ಪ್ರಾಂತ್ಯಗಳಿಗೆ ತಮ್ಮದೇ ಆದ ಅನುಕ್ರಮ ಸಂವಿಧಾನವನ್ನು ಕುರಿತು ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಅಂತಹುದೇ ಒಂದು ಅವಕಾಶವನ್ನು ಒದಗಿಸುತ್ತದೆ. ಅದು ಹೀಗೆ ಹೇಳುತ್ತದೆ :

> "ಯಾವುದೇ ಪ್ರಾಂತ್ಯದ ಸಂವಿಧಾನವು ಅಂತಿಮವಾಗಿ ಇತ್ಯರ್ಥವಾಗುವ ಮೊದಲು, ಆ ಉದ್ದೇಶಕ್ಕಾಗಿ ನಿಗದಿಪಡಿಸಿದ ಕಾಲಮಿತಿಯಲ್ಲಿಯೇ ವಿಭಾಗಗಳು ಇತ್ಯಾದಿಗಳ ನಿರ್ಣಯಗಳು ಮತ್ತು ನಿರ್ಧಾರಗಳ ಮೇಲೆ ತನ್ನದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಅದಕ್ಕೆ ಒಂದು ಅವಕಾಶವನ್ನು ನೀಡಬೇಕು."

ಇದು ಸಹಜವಾಗಿಯೇ ಇಡೀ ದೇಶಕ್ಕೆ, ವಿಧಾಯಕ ಸಭೆ, ವಿಭಾಗಗಳು ಅಥವಾ ಸಂವಿಧಾನದ ಭಾಗಗಳನ್ನು ಕುರಿತು ವಿವೇಚಿಸುವ ಬೇರೆ ಯಾವುದೇ ಸಮಿತಿಗಳು ಚರ್ಚಿಸಬಹುದಾದ ವಿವಿಧ ಪ್ರಸ್ತಾವಗಳನ್ನು ಪರಿಶೀಲಿಸಲು ಒಂದು ಅವಕಾಶವನ್ನು ನೀಡುತ್ತದೆ.

ನಿಯಮ ೫೯ ನಮ್ಮ ಎಲ್ಲ ಚುನಾವಣೆಗಳಿಗೆ ಪ್ರಮಾಣಾನುಗುಣ ಪ್ರಾತಿನಿಧ್ಯದ ತತ್ತ್ವವನ್ನು ಅನ್ವಯಿಸುವುದನ್ನು ಕುರಿತು ವಿವೇಚಿಸುತ್ತದೆ. ನಿಯಮಗಳ ತಿದ್ದುಪಡಿಯನ್ನು ನಿಯಮ ೬೧ ಮತ್ತು ೬೫ರಲ್ಲಿ ವಿವೇಚಿಸಲಾಗಿದೆ. ಈ ನಿಯಮಗಳನ್ನು ಉಚಿತವಾದ ವ್ಯತ್ಯಾಸಗಳನ್ನು ಮಾಡಿ ವಿಭಾಗಗಳು ಮತ್ತು ವಿಧಾಯಕ

ಸಭೆಯ ಶಾಖೆಗಳಿಗೆ ಅನ್ವಯಿಸುವ ಅವಕಾಶವನ್ನು ಒದಗಿಸಲಾಗಿದೆ. ವಿಭಾಗಗಳು ಈ ನಿಯಮಗಳಿಗೆ ಅಸಮಂಜಸವಲ್ಲದ ಸ್ಥಾಯೀ ಆದೇಶಗಳನ್ನು ಮಾಡಿಕೊಳ್ಳಬಹುದಾಗಿದೆ.

ನಿಯಮ ೬೩ ಈ ನಿಯಮಗಳನ್ನು ಅನುಷ್ಠಾನಗೊಳಿಸುವಾಗ ಉದ್ಭವಿಸಬಹುದಾದ ಯಾವುದೇ ತೊಂದರೆಗಳೊಡನೆ ವ್ಯವಹರಿಸಲು ಸಭಾಧ್ಯಕ್ಷರಿಗೆ ಅಧಿಕಾರವನ್ನು ಕೊಡುತ್ತದೆ. ಇದು ನಿಯಮಗಳ ಸಾಮಾನ್ಯ ಚೌಕಟ್ಟು. ಇದು ಈ ಸದನದ ಅಂಗೀಕಾರವನ್ನು ಪಡೆಯುತ್ತದೆ ಎನ್ನುವುದು ನನ್ನ ನಿರೀಕ್ಷೆ. ಆದ್ದರಿಂದ ನಾನು ಈಗ ಈ ವರದಿಯನ್ನು ಔಪಚಾರಿಕವಾಗಿ ಈ ಸದನದ ಮುಂದೆ ಮಂಡಿಸುತ್ತೇನೆ. ಮುಂದುವರಿದು ನಾನು ಪ್ರಾರ್ಥಿಸುವುದೇನೆಂದರೆ, ಚರ್ಚೆ ಮತ್ತು ರವಾನೆಯ ಅನೌಪಚಾರಿಕತೆಯನ್ನು ಭದ್ರಪಡಿಸುವುದಕ್ಕಾಗಿ ಈ ಸದನವು ಇಡೀ ಶಾಸನ ಸಭೆಯ ಸಮಿತಿಯೊಳಕ್ಕೆ ಪ್ರವೇಶಿಸಬೇಕು ಮತ್ತು ಅದರ ನಡವಳಿಕೆಗಳನ್ನು ಏಕಾಂತದಲ್ಲಿ ನಡೆಸಬಹುದು.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ನಾನು ಇದನ್ನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು.)

**ಶ್ರೀ ಬಿ. ಶಿವರಾವ್** (ಮದ್ರಾಸ್ : ಸಾಮಾನ್ಯ) : ನಾನು ಈ ಸದನಕ್ಕೆ ಒಂದು ಸಲಹೆಯನ್ನು ಮಾಡಬೇಕಾಗಿದೆ. ಇದಕ್ಕೆ ಅನೇಕ ಸದಸ್ಯರು ಚೆನ್ನಾಗಿಯೇ ಬೆಂಬಲ ನೀಡುತ್ತಾರೆ ಎಂದು ನಾನು ಬಲ್ಲೆ.

ಈ ವರದಿಯು ನಮಗೆ ಕಳೆದ ರಾತ್ರಿ ತಡವಾಗಿ ಅಥವಾ ಇಂದು ಬೆಳಗ್ಗೆ ತಲಪಿತು. ನಮ್ಮಲ್ಲಿ ಬಹುಪಾಲು ಜನರಿಗೆ ಈ ವರದಿಯನ್ನು ಕೂಲಂಕಷವಾಗಿ ನೋಡಲು ಸಾಕಾಗುವಷ್ಟು ಅವಕಾಶ ಸಿಕ್ಕಲಿಲ್ಲ. ನಾನು ಮಾಡಬೇಕೆಂದಿರುವ ಸಲಹೆ ಇದು. ಇಂದು ಅಪರಾಹ್ನ ಈ ಸದನವು ಸಭೆ ಸೇರುವುದು ಬೇಡ. ಆಗ ನಿಯಮಗಳಲ್ಲಿ ಆಸಕ್ತಿಯಿರುವ ನಮ್ಮಲ್ಲಿ ಕೆಲವರು ನಾವು ನಾವೇ ಸಭೆ ಸೇರುವ ಅವಕಾಶ ದೊರೆಯುತ್ತದೆ. ನಮ್ಮ ತಿದ್ದುಪಡಿಗಳನ್ನು ವಿಂಗಡಿಸಿ ಪ್ರಧಾನವಾದವುಗಳನ್ನು ನಾಳೆ ಬೆಳಗ್ಗೆ ಈ ಸದನದಲ್ಲಿ ಚರ್ಚಿಸಲು ಆರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ವಿಧಾನವನ್ನು ಅಂಗೀಕರಿಸಿದರೆ ಇಂದು ಇಲ್ಲಿ ಮಂಡಿಸಬಹುದಾದ ಅಪಾರ ಸಂಖ್ಯೆಯ ತಿದ್ದುಪಡಿಗಳು ಪೂರ್ವಭಾವಿ ಹಂತದಲ್ಲಿಯೇ ಫೈಸಲಾಗುತ್ತವೆ, ಮತ್ತು ನಾಳೆಯೇ ನಾವು ಇಡೀ ಕೆಲಸವನ್ನು ಮುಗಿಸಿಬಿಡಬಹುದು. ಆದ್ದರಿಂದ ನಾನು ಸಲಹೆಮಾಡುವುದೇನೆಂದರೆ ಇಂದು ನಾವು ಸಭೆ ಸೇರುವುದು ಬೇಡ, ನಾಳೆ ಬೆಳಗ್ಗೆಯೇ ಸೇರೋಣ.

**ಮಾನ್ಯ ಅಧ್ಯಕ್ಷರು :** ವೈಯಕ್ತಿಕವಾಗಿ, ನನ್ನದೇನೂ ಅಭ್ಯಾಂತರವಿಲ್ಲ. ಹಾಗಾದರೆ ನಾವು ನಾಳೆಯೇ ನಿಯಮಗಳನ್ನು ಕುರಿತು ಚರ್ಚಿಸೋಣ. ನಿಯಮಗಳಲ್ಲಿ ಹೇಳಿರುವ ಕೆಲವು ಸಮಿತಿಗಳಿಗೆ ನಾಡಿದ್ದು ನಾವು ಚುನಾವಣೆಯನ್ನು ಮಾಡೋಣ. ಸದನವು ನಿಯಮಗಳನ್ನು ಕೂಲಂಕಷವಾಗಿ ನೋಡಿ ನಾಳೆ ಮತ್ತು ನಾಡಿದ್ದು ಅಂಗೀಕರಿಸಬಹುದು ಎಂದು ಭಾವಿಸಿದರೆ, ನನಗೆ ವೈಯಕ್ತಿಕವಾಗಿ ಯಾವ ಆಕ್ಷೇಪವೂ ಇಲ್ಲ. ನಾವು ಕೆಲಸವನ್ನು ಮುಗಿಸಲು ಸಮರ್ಥರಾಗುತ್ತೇವೆ ಎಂದು ಈ ಸದನದ ಪರವಾಗಿ ಯಾರಾದರೂ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಾಧ್ಯವೇ ಎಂದು ನನಗೆ ಗೊತ್ತಿಲ್ಲ.

**ಒಬ್ಬರು ಗೌರವಾನ್ವಿತ ಸದಸ್ಯರು :** ನಾವು ನಾಳೆ ಕುಳಿತುಕೊಳ್ಳೋಣ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನನಗೆ ಈ ದಿನ ಬೆಳಗ್ಗೆಯಷ್ಟೇ ನಿಯಮಗಳು ದೊರೆತವು. ನಾನು ನಿಯಮಗಳನ್ನು ಓದಿ ನೋಡಿದೆ. ಮಾನ್ಯರೆ, ಅವುಗಳಲ್ಲಿ ಬಹುಪಾಲು ಅವಿವಾದಾತ್ಮಕ ಎಂದು ನನಗೆ ಕಂಡುಬಂದವು. ನಾವು ಸೇರಿಸಬಹುದಾದದ್ದು ಹೆಚ್ಚಿಗೆ ಏನಿಲ್ಲ. ಇದಕ್ಕೆ ವಿನಾಯಿತಿಯೆಂದರೆ ನಿಯಮ ೨೦, ೨೩ ಮತ್ತು ೨೩ಎ ಯಲ್ಲಿರುವ ವಿವಾದಾತ್ಮಕ ಭಾಗಗಳು. ಅವು ಹೆಚ್ಚಾಗಿ ಸಾರಭೂತ ತಿದ್ದುಪಡಿಯ ಸ್ವರೂಪದವು. ಆದ್ದರಿಂದ ಮುಂದೂಡಿಕೆಯನ್ನು ಕೇಳಿ ನಾವು ಸಮಯವನ್ನು ವ್ಯರ್ಥ ಮಾಡದಿರೋಣ. ನಾಳೆ ಎಂದೂ ಬರುವುದಿಲ್ಲ. ಇಂದೇ ಅದನ್ನು ಮಾಡೋಣ.

**ಶ್ರೀ ಸೋಮನಾಥ ಲಹಿರಿ** : ಮಾನ್ಯರೆ, ಗೌರವಾನ್ವಿತ ಸಜ್ಜನರು ಅದರಲ್ಲಿ ಸೇರಿಸಬೇಕಾದದ್ದು ಏನೂ ಇಲ್ಲ ಎಂದು ಹೇಳಿದ್ದಾರೆ. ಏನೇ ಆಗಲಿ, ನಾವು ಅವುಗಳನ್ನು ಕೂಲಂಕಷವಾಗಿ ನೋಡಿ ಗೌರವಾನ್ವಿತ ಸದಸ್ಯರು ಕಂಡುಕೊಂಡದ್ದನ್ನೇ ನಾವೂ ಕಂಡುಹಿಡಿಯಬೇಕು.

**ಶ್ರೀ ಕೆ.ಎಮ್. ಮುನ್ಷಿ** : ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಶಿವರಾವ್ ಅವರ ಪ್ರಸ್ತಾವವನ್ನು ವಿರೋಧಿಸಲು ನಾನು ಅನುಮತಿ ಕೋರುತ್ತೇನೆ. ಅಷ್ಟಕ್ಕೂ ಮುಂದೂಡುವುದರಲ್ಲಿ ಏನೂ ಅರ್ಥವಿಲ್ಲ. ನಾಳೆ ನಾವು ಕೂರುತ್ತೇವೆ ಮತ್ತು ಒಂದು ಮುಕ್ತವಾದ ಮತ್ತು ಪೂರ್ಣ ಪ್ರಮಾಣದ ಚರ್ಚೆಯನ್ನು ಮಾಡುತ್ತೇವೆ. ಈಗ ತಾನೆ ಗೌರವಾನ್ವಿತ ಸದಸ್ಯರೊಬ್ಬರು ಹೇಳಿದಂತೆ ಬಹುಪಾಲು ನಿಯಮಗಳನ್ನು ಎಚ್ಚರಿಕೆಯಿಂದ ಬರೆಯಲಾಗಿದೆ. ಕೆಲವು ದೋಷಗಳು ಇರಬಹುದು ಅವನ್ನು ತಿದ್ದುಕೊಳ್ಳಬಹುದು. ತತ್ತ್ವ ಅಥವಾ ವಿವಾದಾತ್ಮಕ ಪ್ರಶ್ನೆಗಳು ಮಾತ್ರ ಸಮಯವನ್ನು ತೆಗೆದುಕೊಳ್ಳುತ್ತವೆ. ಇನ್ನು ಉಳಿದವುಗಳನ್ನು ಒಂದೊಂದನ್ನಾಗಿ ತೆಗದುಕೊಳೋಣ ಮತ್ತು ಅವುಗಳಲ್ಲಿ ವಿವಾದಾತ್ಮಕ ಅಂಶಗಳು ಏನೂ ಇಲ್ಲದಿದ್ದರೆ ಸುಲಭವಾಗಿ ಅವುಗಳನ್ನು ಅಂಗೀಕರಿಸಬಹುದು. ಈ ನಿಯಮಗಳೊಡನೆ ವ್ಯವಹರಿಸಲು ಇದು ಅತ್ಯಂತ ಹತ್ತಿರದ ದಾರಿ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಮುನ್ಷಿ ಒಂದಾದ ಮೇಲೊಂದು ನಿಯಮವನ್ನು ಓದುತ್ತಾರೆ ಮತ್ತು ಒಂದು ಕ್ಷಣ ನಿಲ್ಲುತ್ತಾರೆ. ಅದಕ್ಕೆ ಸೇರಿಸಬೇಕಾದದ್ದು ಏನೂ ಇಲ್ಲದಿದ್ದರೆ ನಾವು ಕೂಡಲೇ ಅದನ್ನು ಅಂಗೀಕರಿಸೋಣ. ಅನಂತರ ನಾವು ಮುಂದಿನ ನಿಯಮಕ್ಕೆ ಹೋಗೋಣ. ಯಾವ ನಿಯಮ ವಿವಾದಾತ್ಮಕವಾಗಿದೆಯೋ ಅದನ್ನು ನಾಳೆಗೆ ಇಟ್ಟುಕೊಳ್ಳೋಣ. ಅಷ್ಟು ಹೊತ್ತಿಗೆ ಅದಕ್ಕೆ ಏನಾದರೂ ತಿದ್ದುಪಡಿ ಅಗತ್ಯವಾಗಿದೆಯೋ ಎಂದು ನಾವು ಕಂಡುಕೊಳ್ಳಬಹುದು.

**ಮಾನ್ಯ ಅಧ್ಯಕ್ಷರು** : ನಿಯಮಗಳ ಪರಿಶೀಲನೆಯನ್ನು ಮುಂದುವರಿಸಬಹುದು ಎನ್ನುವುದು ಈ ಸದನದ ಆಶಯ ಎಂದು ನಾನು ತೆಗೆದುಕೊಳ್ಳಬಹುದೆ?

**ಅನೇಕ ಗೌರವಾನ್ವಿತ ಸದಸ್ಯರು** : ಹೌದು.

**ಮಾನ್ಯ ಅಧ್ಯಕ್ಷರು** : ವಿರೋಧಿಸುವವರು ಯಾರಾದರೂ ಇದ್ದಾರೆಯೆ?

(ಯಾರೂ ಇಲ್ಲ.)

**ಮಾನ್ಯ ಅಧ್ಯಕ್ಷರು** : ನಾವು ಈ ನಿಯಮಗಳನ್ನು ತೆಗೆದುಕೊಳ್ಳೋಣ. ಒಂದು ಗಂಟೆ ಆಗುವುದಕ್ಕೆ ಇನ್ನು ಅರ್ಧ ಗಂಟೆ ಅಷ್ಟೇ ಇರುವುದರಿಂದ, ನಾವು ಎರಡೂವರೆ ಅಥವಾ ಮೂರು ಗಂಟೆಗೆ ಪ್ರಾರಂಭಿಸೋಣ.

**ಅನೇಕ ಗೌರವಾನ್ವಿತ ಸದಸ್ಯರು** : ಮೂರು ಗಂಟೆ.

**ಶ್ರೀ ಕೆ.ಎಮ್. ಮುನ್ಷಿ** : ಅರ್ಧ ಗಂಟೆಯಲ್ಲಿ ನಾವು ಕೆಲವು ನಿಯಮಗಳನ್ನು ಮುಗಿಸಬಹುದು.

**ಮಾನ್ಯ ಅಧ್ಯಕ್ಷರು** : ನಾವು ಮೂರು ಗಂಟೆಗೆ ಏಕಾಂತದಲ್ಲಿ ಪ್ರಾರಂಭಿಸೋಣ. ಸದನವು ಸಮಿತಿಯ ಒಳಗೆ ಹೋಗುತ್ತದೆ ಮತ್ತು ಮೂರು ಗಂಟೆಗೆ ಸಭೆ ಸೇರುತ್ತದೆ.

ಅನಂತರ ಸಭೆಯನ್ನು ಭೋಜನೆ ವಿರಾಮಕ್ಕೆಂದು ಅಪರಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಯಿತು.

ಸಭೆಯು ಭೋಜನ ವಿರಾಮದ ಅನಂತರ ಅಪರಾಹ್ನ ಮೂರು ಗಂಟೆಗೆ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಪುನಃ ಸೇರಿತು.

(ಅನಂತರ ನಡವಳಿಗಳನ್ನು ಏಕಾಂತದಲ್ಲಿ ನಡೆಸಲಾಯಿತು.)

*[ ]* ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.